

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 Issue : 258 Friday 21-06-2024 E-mail : maruti.b.hosamani76@gmail.com Page: 4 Price : Rs. 1/-


## ಅರುಂಧತಿ ರಾಯ್ ಮತ್ತಿತರರನ್ನು ಸುಳ್ಳು ಕೇಸ್ ದಾಖಲಿಸುತ್ತಿರುವುದು ಸಿ.ಪಿ.ಐ.ಎಂ.ಎಲ್ ಲಿಬರೇಷನ್ ಪಕ್ಷದಿಂದ ಖಂಡನೆ

**ಕೊಟ್ಟೂರು :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದ ದಿನಾಂಕ ಜೂನ್ 20, 2024 ರಂದು ಮಾನ್ಯ ರಾಷ್ಟ್ರಪತಿಗಳು ದ್ರೌಪದಿ ಮುರ್ಮು ಹೊಸ ದೆಹಲಿ ಇವರಿಗೆ ತಾಲೂಕು ದಂಡಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಲಾಯಿತು.

ಖ್ಯಾತ ಲೇಖಕಿ ಅರುಂಧತಿ ರಾಯ್ ಮತ್ತು ಶೇಕ್ ಶೋಖಾತ್ ಹುಸೇನ್ ಮಾಜಿ ಪ್ರಾಧ್ಯಾಪಕ ವಿರುದ್ಧ ಭಯೋತ್ಪಾದನಾ ವಿರೋಧಿ ಕಾನೂನು (ಯುಎಪಿಎ) ಅಡಿಯಲ್ಲಿ ಕಾನೂನು ಕ್ರಮಕ್ಕೆ ಅವಕಾಶ ನೀಡಿರುವುದಕ್ಕೆ ಸಿಪಿಐ (ಎಂಎಲ್) ಲಿಬರೇಶನ್ ಖಂಡನೆ

ಭಯೋತ್ಪಾದನಾ–ವಿರೋಧಿ ಪ್ರಕರಣದಲ್ಲಿ ಮಾನವ ಹಕ್ಕುಗಳ ಹೋರಾಟಗಾರರನ್ನು ದುರುದ್ದೇಶ ಪೂರ್ವಕವಾಗಿ ತಳುಕು ಹಾಕಿ ಆರುಂಧತಿ ರಾಯ್ ಮತ್ತಿತರರನ್ನು ಸುಳ್ಳು ಕೇಸ್ ದಾಖಲಿಸುತ್ತಿರುವುದು ಸಿಪಿಐಎಂಎಲ್ ಲಿಬರೇಶನ್ ಬಲವಾಗಿ ಖಂಡಿಸಿ ಗುರುವಾರ ಕೊಟ್ಟೂರು ಉಪ ತಹಸಿಲ್ದಾರ್ ಅನ್ನದಾನೇಶ್ವರ ಅವರಿಗೆ ಮನವಿ ಪತ್ರ ಸಲ್ಲಿಸಿದರು

ಆರುಂಧತಿ ರಾಯ್ ಅವರು ಸಂವಿಧಾನ ವಿರೋಧಿ, ಜನ ವಿರೋಧಿ ನೀತಿಗಳು, ಅನ್ಯಾಯಗಳ ವಿರುದ್ಧ ನಿರಂತರ ಧ್ವನಿ ಎತ್ತುತ್ತಾ ಬಂಧವರು, ದಮನಿತರ ಮೇಲೆ ದೇಶಾದ್ಯಂತ ನಡೆಯುತ್ತಿರುವ ದೌರ್ಜನ್ಯಗಳನ್ನು ಗುರುತಿಸಿ ಅವುಗಳನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ತಲುಪಿಸಿ ಜನ ವಿರೋಧಿ, ಅಪ್ರಜಾತಾಂತ್ರಿಕ ಆಳುವ ವರ್ಗಗಳ ನಿಜಬಣ್ಣವನ್ನು ಬಯಲು ಗೊಳಿಸಿದ್ದಾರೆ. ದೇಶದಲ್ಲಿ ಜನಪರ ಹೋರಾಟಗಳನ್ನು ಸಂಘಟಿಸುವ ಯತ್ನ ನಡೆಸಿದರೆ, ಅವರ ಸ್ಥಿತಿ ಏನಾಗುತ್ತದೆ ಎನ್ನುವುದನ್ನು ಜನಪರ ಚಳಿವಳಿಗಾರರಿಗೆ ಎಚ್ಚರಿಕೆಯ ರೂಪದಲ್ಲಿ ತಿಳಿಸುವ ಉದ್ದೇಶದಿಂದ ಸರಣಿ ಬಂಧನ ನಡೆದಿದೆ. ಅಲ್ಲದೇ ದೇಶದ ಜನಪರವಾದ ಜನ ಚಳವಳಿಯನ್ನು ಬಗ್ಗು ಬಡಿಯುವುದು ಸರಕಾರಗಳ ದುರುದ್ದೇಶವಾಗಿದೆ.

14 ವರ್ಷಗಳ ಹಿಂದಿನ ಪ್ರಕರಣದಲ್ಲಿ ಲೇಖಕಿ ಅರುಂಧತಿ ರಾಯ್ ಮತ್ತು ಶಿಕ್ಷಣ ತಜ್ಞ ಶೇಖ್ ಶೌಕತ್ ಹುಸೇನ್ ಅವರನ್ನು ಯುಎಪಿಎ ಅಡಿಯಲ್ಲಿ ವಿಚಾರಣೆಗೆ ಒಳಪಡಿಸಲು ಅವಕಾಶ ನೀಡಿದ ನಿರ್ಧಾರವನ್ನು ಕೈ ಬೀಡಬೇಕು. ಚುನಾವಣಾ ಫಲಿತಾಂಶದ ನಂತರ ಈ ರೀತಿ ಮಾಡಿರುವುದನ್ನು ನೋಡಿದರೆ ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ವಿರುದ್ಧ ಪ್ರತೀಕಾರದ ಕ್ರಮ ಈ ಕ್ರಮದ ವಿರುದ್ಧ ಎಲ್ಲಾ ಪ್ರಜಾತಂತ್ರವಾದಿಗಳು ಧ್ವನಿ ಎತ್ತಬೇಕೆಂದು. ಯುಎಪಿಎಯಂತಹ ಗಂಭೀರವಾದ ಸೆಕ್ಷನ್ಗಳ ಅಡಿಯಲ್ಲಿ ಮೊಕದ್ದಮೆಗೆ ಅವಕಾಶ ನೀಡುವ ಮೂಲಕ ಬಿಜೆಪಿ ಸರ್ಕಾರವು ಜನರ ಪ್ರಜಾತಾಂತ್ರಿಕ ಹಕ್ಕುಗಳ ಧ್ವನಿಯನ್ನು ಹೊಸಕಿ ಹಾಕುವ ಉದ್ದೇಶವನ್ನು ಹೊಂದಿದೆ ಎಂಬುದು ಸ್ಪಷ್ಟವಾಗಿದೆ. ಅರುಂಧತಿ ರಾಯ್ ಅವರ



ಮೇಲೆ ಯುಎಪಿಎ ಸೆಕ್ಷನ್ ಅಡಿಯಲ್ಲಿ ಕ್ರಮ ಜರುಗಿಸಲು ನೀಡಿರುವ ಅನುಮತಿಯನ್ನು ಕೂಡಲೇ ಹಿಂಪಡೆಯ ಬೇಕು ಹಾಗೂ ಕಾಯ್ದೆ ರದ್ದು ಗೊಳಿಸಬೇಕೆಂದು ಸಿಪಿಐಎಂಎಲ್ ಲಿಬರೇಶನ್ ಒತ್ತಾಯಿಸುತ್ತಿದೆ.

2010 ರಲ್ಲಿ ನಡೆದಿದ್ದ ಸಮಾರಂಭವೊಂದರಲ್ಲಿ ಭಾಷಣಗೈದ ಪ್ರಕರಣ–ಕ್ಕೆ ಸಂಬಂಧಿಸಿದಂತೆ ಖ್ಯಾತ ಲೇಖಕಿ ಅರುಂಧತಿ ರಾಯ್ ವಿರುದ್ಧ ಭಯೋತ್ಪಾದನಾ–ವಿರೋಧಿ ಕಾನೂನು (ಯುಎಪಿಎ) ಅಡಿಯಲ್ಲಿ ತನಿಖೆ ನಡೆಸಲು ದೆಹಲಿ ಲೆಫ್ಟಿನೆಂಟ್ ಗವರ್ನರ್ ನಿರ್ದೇಶನ ನೀಡಿರುವುದು ಖಂಡನೀಯ, ಈ ಘಟನೆಯನ್ನೇ ನೆಪವಾಗಿಟ್ಟು ಕೊಂಡು ಅತ್ಯಂತ ಕಠಿಣ ಕಾನೂನಿನಡಿಯಲ್ಲಿ ಯಾವುದೇ ಸಾಕ್ಷಾಧಾರಗಳಿಲ್ಲದೇ ಅವರ ವಿರುದ್ಧ ಸುಳ್ಳು ಕೇಸ್ ದಾಖಲಿಸಿರುವುದು ಇದರ ಉದ್ದೇಶ ಎಲ್ಲ ಮಾನವ ಹಕ್ಕು ಹೋರಾಟಗಾರರನ್ನು, ದಲಿತ ಚಿಂತಕರನ್ನು ಜೈಲಿಗಟ್ಟಿ ನ್ಯಾಯವನ್ನು ಶಾಶ್ವತವಾಗಿ ಸಮಾದಿ ಮಾಡುವುದಾಗಿದೆ. ಹಾಗಾಗಿ ಕೂಡಲೇ ಸುಳ್ಳು ಕೇಷಕ್ಗಳನ್ನು ವಜಾಗೊಳಿಸಿ, ಮಾನವ ಹಕ್ಕುಗಳ ಹೋರಾಟಗಾರರು, ದಲಿತ, ದಮನಿತರ ಪರ ಚಿಂತಕರನ್ನು ಬಿಡುಗಡೆ ಗೊಳಿಸುವ ಮೂಲಕ ನ್ಯಾಯಪರತೆಎತ್ತಿಹಿಡಿಯಬೇಕುಆಮೂಲಕಜನವಿರೋಧಿನಿಲುವುಗಳಿಗೆ ಕಡಿವಾಣ ಹಾಕಬೇಕೆಂದು ಸಿಪಿಐಎಂಎಲ್ ಲಿಬರೇಶನ್ ಆಗ್ರಹಿಸುತ್ತೇದೆ.

ಈ ಸಂದರ್ಭದಲ್ಲಿ ತಾಲೂಕು ಕಾರ್ಯದರ್ಶಿ ಜಿ ಮಲ್ಲಿಕಾರ್ಜುನ,ಕೆ ಪರಸಪ್ಪ ತಾಲೂಕು ಸಮಿತಿ ಸದಸ್ಯ, ಎಂ ಯು ಕರಿಬಸಯ್ಯ ಕೆ ಅಯ್ಯನಹಳ್ಳಿ ಗ್ರಾಮದ ಘಟಕದ ಅಧ್ಯಕ್ಷ,ಪಿ ಚಂದ್ರಶೇಖರ್ ಡಿ.ಎಸ್.ಎಸ್ ತಾಲೂಕ ಅಧ್ಯಕ್ಷರು ,ಮಲ್ಲನಾಯಕನಹಳ್ಳಿ ಅಂಜಿನಪ್ಪ ,ದುರ್ಗದಾಸ್ ಮಂಗನಹಳ್ಳಿ ,ಗಣೇಶ್ ,ಸಿದ್ದಲಿಂಗ ಸ್ವಾಮಿ ಗ್ರಾಮ ಪಂಚಾಯಿತಿ ಸದಸ್ಯರು, ಕರಿಮ್, ಅಬ್ದುಲ್ ಸಾಬ್, ಹಸೇನ್ ಜಿ ಶಾನ್ ,ಹಾಗೂ ವೆಂಕಟಸ್ವಾಮಿ ಸಿಪಿಐ , ಪೋಲಿಸ್ ಸಿಬ್ಬಂದಿಯ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್ ಕುಮಾರ್ ಸಿ.ಕೊಟ್ಟೂರು.**

## ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆಯನ್ನು ಒದಗಿಸಿ: 2.60 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ

**ಹುನಗುಂದ :** ಸರ್ಕಾರಿ ನೌಕರರ 7 ನೇ. ವೇತನ ಪರಿಷ್ಕರಣೆ ಜಾರಿ, ಹಳೆಯ ನಿಶ್ಚಿತ ಪಿಂಚಣಿ ಮರುಸ್ಥಾಪನೆ, 2.60 ಲಕ್ಷ ಖಾಲಿ ಹುದ್ದೆಗಳ ಭರ್ತಿ ಹಾಗೂ ಹೊರಗುತ್ತಿಗೆ ನೌಕರರಿಗೆ ಕೆಲಸದ ಭದ್ರತೆ ಒದಗಿಸಲು ಒತ್ತಾಯಿಸಿ ಬುಧವಾರ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ಪ್ರತಿಭಟನೆ ನಡೆಸಿ ಗ್ರೇಡ್–2 ತಹಶೀಲ್ದಾರ ಮಹೇಶ ಸಂದಿಗವಾಡ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆಯಲ್ಲಿ ಒಕ್ಕೂಟದ ರಾಜ್ಯ ಜಂಟಿ ಕಾರ್ಯದರ್ಶಿ ಬಸವರಾಜ ಜಿ ಗೌಡರ ಮಾತನಾಡಿ ಕರ್ನಾಟಕ ರಾಜ್ಯ 7 ನೇ. ವೇತನ ಆಯೋಗವು ತನ್ನ ಶಿಫಾರಸ್ಸುಗಳನ್ನು ಸಲ್ಲಿಸಲು ಎರಡು ಬಾರಿ ಅವಧಿ ವಿಸ್ತರಣೆ ಪಡೆದು, ಸುದೀರ್ಘ ಕಾಲದ ನಂತರ ಅಂತಿಮವಾಗಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. 7 ನೇ ವೇತನ ಆಯೋಗದ ಶಿಫಾರಸ್ಸುಗಳು ಸ್ಪಷ್ಟವಾಗಿರದೇ ಗೊಂದಲ ದಿಂದ ಕೂಡಿ–ದ್ದು, ನೌಕರರ ವೇತನ ಪ್ರಮಾಣವನ್ನು ಕಡಿತ ಗೊಳಿಸುವ ಕ್ರಮಗಳನ್ನು ಹೊಂದಿದೆ ಎಂದು ಆರೋಪಿಸಿದರು.ಜುಲೈ 2022 ರಂದು 7 ನೇ. ವೇತನ ಆಯೋಗದ ಪರಿಷ್ಕರಣೆಯನ್ನು ಕಾಲ್ಪನಿಕವಾಗಿ ಪರಿಗಣಿಸಿ, ನೌಕರರಿಗೆ ಮಧ್ಯಂತರ ಪರಿಹಾರವನ್ನು ನೀಡಿದ ರಾಜ್ಯ ಸರ್ಕಾರವು ಆದೇಶಿಸುವುದು ವೈಜ್ಞಾನಿಕವಾದುದು. ಮನೆ ಬಾಡಿಗೆ ಭತ್ಯೆ, ಪ್ರಭಾರ ಭತ್ಯೆ, ಅಂಗವಿಕಲರ ನೌಕರರ ಭತ್ಯೆ, ಸಮವಸ್ತ್ರ ಭತ್ಯೆ, ಇತ್ಯಾದಿಗಳನ್ನು ಬೆಲೆಯೇರಿಕೆ ಮಟ್ಟಕ್ಕನುಗುಣವಾಗಿ ಹೆಚ್ಚಿಸಬೇಕು ಎಂದರು.



ಒಕ್ಕೂಟದ ತಾಲೂಕ ಅಧ್ಯಕ್ಷ ಕೆ.ವ್ಹಿ. ಮಡಿವಾಳರ ಮಾತನಾಡಿ ಹೊಸ ಪಿಂಚಣಿ ವ್ಯವಸ್ಥೆಯಿಂದಾಗಿ ಸರ್ಕಾರಿ ನೌಕರರಿಗೆ ಯಾವುದೇ ನಿಶ್ಚಿತ ಪ್ರಮಾಣದ ಪಿಂಚಣಿ ಸಿಗದೇ ಸಂಧ್ಯಾ ಕಾಲದಲ್ಲಿ ನೌಕರ ಬದುಕು ಬೀದಿಗೆ ಬಿದ್ದಂತಾಗಿದೆ. ನೌಕರರು ಮತ್ತು ಸರ್ಕಾರಗಳ ವಂತಿಕೆ ಹಣವನ್ನು ಷೇರು ಮಾರುಕಟ್ಟೆಯಲ್ಲಿ ಕಂಪನಿಗಳ ಭದ್ರತೆ ಒದಗಿಸಲು ತೊಡಗಿಸಿದಂತಾಗಿದೆ. ಆದ್ದರಿಂದ, ಎನ್.ಪಿ.ಎಸ್ ಪದ್ದತಿ ರದ್ದು ಪಡಿಸಿ, ಹಳೆಯ ನಿಶ್ಚಿತ ಪಿಂಚಣಿ ವ್ಯವಸ್ಥೆ ಮರು ಸ್ಥಾಪಿಸಲು ಸರ್ಕಾರವು ಆಶ್ವಾಸನೆ ನೀಡಿರುವಂತೆ ಓಪಿಎಸ್ ಜಾರಿ ಮಾಡಬೇಕು.ಸರ್ಕಾರದ ವಿವಿಧ ಇಲಾಖೆಗಳು, ನಿಗಮ/ ಮಂಡಳಿಗಳಲ್ಲಿ ಲಕ್ಷಾಂತರ ಯುವಜನತೆ ಯಾವುದೇ ಸೇವಾ ಭದ್ರತೆ ಇಲ್ಲದೇ, ಕನಿಷ್ಟ ವೇತನವಾಗಲಿ,ಕಾನೂನುಬದ್ದವಾಗಿ ನೀಡಬೇಕಾದ ಇ.ಎಸ್.ಐ/ಪಿ.ಎಫ್ ಸೌಲಭ್ಯಗಳಾಗಲಿ,ಮಾಸಿಕ ವೇತನ ಸರಿಯಾದ ದಿನಾಂಕಕ್ಕೆ ನೀಡುವುದಾಗಲಿ ಇದಾವುದೂ ಇಲ್ಲದೇ, ಹೊರಗುತ್ತಿಗೆ ನೌಕರರು ಆಧುನಿಕ ಜೀತಪದ್ದತಿಯಂತೆ ಹೊರಗುತ್ತಿಗೆ ಏಜೆನ್ಸಿಗಳ ಕಪಿಮುಷ್ಟಿಗೆ ಸಿಲುಕಿ ನರಳುತ್ತಿದ್ದಾರೆ. ಹೊರಗುತ್ತಿಗೆ ನೌಕರರ ಸಮಸ್ಯೆಗಳನ್ನು ಪರಿಹರಿಸಿ ಅವರಿಗೆ ಸೇವಾ ಭದ್ರತೆ ಒದಗಿಸಬೇಕು ಇಲ್ಲದಿದ್ದರೇ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಬಿ.ಬಿ.ಅಂಬಿಗೇರ,ಎಸ್.ಕೆ.ಕೊನೆಸಾಗರ, ಸಿದ್ದಲಿಂಗಪ್ಪ ಬೀಳಗಿ,ಎಂ.ಎನ್.ನದಾಫ್, ಸಂಗಣ್ಣ ನಾಗೂರ,ಬಿ.ಎಚ್.ಕರಡಿ,ಬಿ.ಆರ್. ಯಂಡಿಗೇರಿ, ಗಿರಿಜಾ ಮಡಿವಾಳರ,ಎಸ್. ಎಂ.ಹೊಕ್ರಾಣಿ,ವಿ.ಎಚ್.ಗೌಡರ,ಎಚ್. ಎಂ.ಕಲ್ಪನಾ,ಕೆ.ಎನ್.ಜಲಗೇರಿ,ಎಲ್,ವಾಯ್. ಗುಂಡಿಮನಿ,ವಿಜಯಾ ಗೌಡರ ಸೇರಿದಂತೆ ಅನೇಕರು ಇದ್ದರು.

**ತಾಲೂಕು ವರದಿಗಾರರು ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನೆಲ್:ಮಲ್ಲಿಕಾರ್ಜುನ್. ಎಂ. ಬಂಡರಗಲ್ಲ ಹುನಗುಂದ.**

## ಸಂಘಟಿತ ಪ್ರಯತ್ನದಿಂದ ಸಮಸ್ಯೆ ನಿವಾರಣೆ



**ಬಾಗಲಕೋಟೆ :** ಬಾಲಕಾರ್ಮಿಕ ಪದ್ಧತಿಯಂತಹ ಹಲವು ಸಾಮಾಜಿಕ ಸಮಸ್ಯೆಗಳನ್ನು ಸಂಘಟಿತ ಪ್ರಯತ್ನದಿಂದ ನಿವಾರಿಸಬಹುದು ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು.

ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಎನ್.ಎಸ್.ಎಸ್. ಘಟಕ 1 ಮತ್ತು 2 ಬುಧವಾರ ಆಯೋಜಿಸಿದ್ದ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಕ್ಕಳು ದೇಶದ ಭವಿಷ್ಯ ಅದು ಉಜ್ವಲವಾಗಲು ಅವರಿಗೆ ಉತ್ತಮ ಶಿಕ್ಷಣ ನೀಡುವುದು ಅವಶ್ಯ. ಅವರಿಗೆ ಉತ್ತಮ ಪರಿಸರ, ಆರೋಗ್ಯ, ರಕ್ಷಣೆ ನೀಡಿದಲ್ಲಿ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಸಾಧ್ಯ. ಬಾಲಕಾಮಿಕ ಪದ್ಧತಿ ಮಕ್ಕಳ ಬಾಲ್ಯವನ್ನು ಕಸಿದುಕೊಂಡು ಅವರ ಸಾಮರ್ಥ್ಯಕ್ಕೆ ಧಕ್ಕೆಯಾಗಿ ಬೆಳವಣಿಗೆಗೆ ಹಿನ್ನಡೆ ಉಂಟುಮಾಡುವುದು ಎಂದರು.

ಈ ಪದ್ಧತಿಯಿಂದ ಮಕ್ಕಳ ರಕ್ಷಣೆಯಾಗಬೇಕು. ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಬೇಕು. ಈ ದಿಶೆಯಲ್ಲಿ ಯುವ ಸಮುದಾಯ ತಮ್ಮ ಕೊಡುಗೆಯನ್ನು ನೀಡಬೇಕು ಎಂದು ಸಲಹೆ ನೀಡಿದರು.

ಹಲವು ಕಾರಣಗಳಿಂದ ಇನ್ನೂ ಅಸ್ತಿತ್ವದಲ್ಲಿರುವ ಈ ಪದ್ಧತಿಯನ್ನು ನಿವಾರಿಸಲು ಸಾಮಾಜಿಕ ಪರಿವರ್ತನೆ ಆಗಬೇಕು. ಶಿಕ್ಷಣಕ್ಕೆ ಸಂಬಂಧಿಸಿದ ಸರ್ಕಾರದ ಕಾನೂನು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕು. ಸೌಲಭ್ಯಗಳು ಫಲಾನುಭವಿಗಳಿಗೆ ತಲುಪಬೇಕು ಎಂದರು.

ಸ್ವಪ್ನಾ ಗೌಡರ ಪ್ರಾರ್ಥಿಸಿದರು. ಎನ್.ಎಸ್.ಎಸ್ ಅಧಿಕಾರಿ ಎನ್.ಎಚ್.ಹಸಬಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಎನ್.ಎಸ್.ಎಸ್ ಅಧಿಕಾರಿ ಎಚ್. ಜಿ ಗೌಡರ ಪ್ರತಿಜ್ಞಾವಿಧಿ ಬೋಧಿಸಿದರು. ಉಪನ್ಯಾಸಕ ಕೃಷ್ಣ ಲಮಾಣಿ ನಿರೂಪಿಸಿದರು.ಎಸ್.ಎಮ್.ಹಡಪದ ವಂದಿಸಿದರು. ಎನ್.ಎಸ್.ಎಸ್ ಸ್ವಯಂ ಸೇವಕರು ಹಾಗೂ ಉಪನ್ಯಾಸಕರು ಪಾಲ್ಗೊಂಡರು.

## ಝುಳಕಿ: ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ



**ಝುಳಕಿ :** ಸಮೀಪದ ಬಳ್ಳೊಳ್ಳಿ ಗ್ರಾಮದ ಶ್ರೀ ಭೀರಲಿಂಗೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಸಂಗಿತ ರಸಮಂಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು, ಶ್ರೀ ದತ್ತ ಮೇಲೊಡಿಸ ವಿಜಯಪುರ, ಉತ್ತರ ಕರ್ನಾಟಕದ ಕಾಮಿಡಿ ಕಿಲಾಡಿ ಖ್ಯಾತಿಯ ಹಾಗೂ ಜೋಡಿ ನಂ1 ಖ್ಯಾತಿಯ ಸಂಜು ಬಸಯ್ಯ ಮತ್ತು ಪಲ್ಲವಿ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಯಿತು , ಮಹನ್ಯಾ ಪಾಟೀಲ, ಸಂಜು ಜಾಲಿಕಟ್ಟಿ, ದಿವ್ಯಾ ಬಳ್ಳಾರಿ, ಮ್ಯುಸಿಕ ಮೈಲಾರಿ, ಸಿದ್ದಾರಾಮ ವಾಲಿ, ರಾಘವೇಂದ್ರ ಕಾಪಸೆ, ಸಣ್ಣಪ್ಪ ತಳವಾರ, ವಿಠ್ಠಲ ಶಿರಶ್ಯಾಡ, ಮಹಾದೇವ ಕದರಿ, ಈರಣ್ಣ ವಾಲಿ, ಶಿವಲಿಂಗ ತುಪ್ಪದ, ರಾಜು ಸಗಾಯಿ, ಸಿದ್ದಾರಾಮ ಶಿರಶ್ಯಾಡ, ಶರಣಯ್ಯ ಮಠಪತಿ, ಗಿರಿಮಲ್ಲಪ್ಪ ಹಿರೇಕುರುಬರ, ಮಾಹಾದೇವ ಹಿರೇಕುರುಬರ, ಪ್ರಕಾಶ ಮೇಲಿನಮನಿ ಹಾಗೂ ಸಕಲ ಗ್ರಾಮಸ್ಥರು ಉಪಸ್ಥಿತರಿದ್ದರು.

## ಕೂಡ್ಲಿಗಿ, ಕಳವು ಪ್ರಕರಣ ಭೇದಿಸಿದ ಪೊಲೀಸರು, ಕಳ್ಳರ ಸೆರೆ ಹಾಗೂ ಚಿನ್ನಾಭರಣ ಬೈಕ್–ಜಪ್ತಿ

**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದಲ್ಲಿ ಜನವರಿ 14 ರಂದು ಜರುಗಿದ್ದ, ಕಳವು ಪ್ರಕರಣವನ್ನು ಪೊಲೀಸರು ಭೇದಿಸಿದ್ದಾರೆ. ಕಳವು ಮಾಡಿದ್ದ ಕಳ್ಳರನ್ನು ಬಂಧಿಸಿದ್ದು, ಅವರಿಂದ ಕಳುವಾಗಿದ್ದ ಚಿನ್ನಾಭರಣಗಳನ್ನು ವಶಕ್ಕೆ ಪಡೆದಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಜೂ 19 ರಂದು ಡಿವೈಎಸ್ಪಿ ನೇತೃತ್ವದಲ್ಲಿ ಸಿಪಿಐಹಾಗೂಪಿಎಸ್ಐರವರು, ಪೊಲೀಸ್ ಠಾಣೆಯಲ್ಲಿ ಏರ್ಪಡಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ. ಪಟ್ಟಣದಲ್ಲಿ ಜನವರಿ 14 ರಂದು ಜರುಗಿದ ಕಳ್ಳತನ ಪ್ರಕರಣವನ್ನು, ವಿಜಯನಗರ ಜಿಲ್ಲಾ ಎಸ್ಪಿ ರವರ ಮಾರ್ಗದರ್ಶನದಲ್ಲಿ. ಕೂಡ್ಲಿಗಿ ಪೊಲೀಸರು ಡಿವೈಎಸ್ಪಿ ಮಲ್ಲೇಶಪ್ಪ ವಿ ಮಲ್ಲಾಪುರ ನೇತೃತ್ವದಲ್ಲಿ, ಸಿಪಿಐ ಸುರೇಶ್ ಎಸ್ ತಳವಾರ ಹಾಗೂ ಪಿಎಸ್ಐ ಧನುಂಜಯಕುಮಾರ ರವರು. ತಮ್ಮ ಅಪರಾಧ ವಿಭಾಗದ ಸಿಬ್ಬಂದಿಯೊಂದಿಗೆ ನಿರಂತರ ಕಾರ್ಯಚರಣೆ ನಡೆಸಿ, ಪ್ರಕರಣ ಭೇದಿಸಿ ಆರೋಪಿಗಳನ್ನು ಬಂಧಿಸಿದ್ದು ಚಿನ್ನಾಭರಣಗಳನ್ನು ವಶಕ್ಕೆ ಪಡೆದಿರುವುದಾಗಿ ತಿಳಿದು ಬಂದಿದೆ.




**"ಪ್ರಕರಣಗಳ ವಿವರ":**

ಜನವರಿ 14 ರಂದು ಕೂಡ್ಲಿಗಿ ಪಟ್ಟಣದ ಬಾಪೂಜಿನಗರದಲ್ಲಿ, ಕೆ.ತಿಪ್ಪೇರುದ್ರಪ್ಪ ಎಂಬುವವರ ಮನೆಗೆ ಹಾಕಲಾಗಿದ್ದ. ಬೀಗವನ್ನುಹಾಗೂ ಚಿಲಕದ ಕೊಂಡಿಯನ್ನು ಯಾರೋ ಕಳ್ಳರು, ಮುರಿದು ಮನೆಯೊಳಗೆ ಹೋಗಿ ಶೋಧ ನಡೆಸಿದ್ದಾರೆ. ಗಾಡ್ರೇಜ್ ಮತ್ತು ಗೋಡೆ ಅಲ್ಮಾರದ ಬಾಗಿಲುಗಳನ್ನು ತೆಗದು, ಅದರಲ್ಲಿದ್ದ 52 ಗ್ರಾಂ ಬಂಗಾರದ ಆಭರಣಗಳು ಬೆಲೆ 2.34.000 ?. ಮತ್ತು 1.00.000 ? ನಗದು ಹಣವನ್ನು, ಒಟ್ಟು 3.34.000 ? ಬೆಲೆ ಬಾಳುವುಗಳನ್ನು. ಯಾರೋ ಕಳ್ಳರು ಕಳವು ಮಾಡಿಕೊಂಡು ಪರಾರಿ ಯಾಗಿರುತ್ತಾರೆಂದು, ನೀಡಿದ ದೂರಿನ ಮೇರೆಗೆ ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಅದೇ ರೀತಿಯಾಗಿ ಅಂದಿನ ದಿನದಂದೇ, ಬಾಪೂಜಿನಗರದ ಡಿ. ಹನುಮಂತಪ್ಪ ಎಂಬುವವರ ಮನೆಗೆ ಬೀಗ ಹಾಕಿದ್ದನ್ನು. ಹಾಗೂ ಚಿಲಕ ಕೊಂಡಿಯನ್ನು ಯಾರೋ ಕಳ್ಳರು ಮುರಿದು ಮನೆಯೊಳು ಹೊಕ್ಕು, ಗಾಡ್ರೇಜ್ ತೆಗೆದು ಅದರಲ್ಲಿದ್ದ 86 ಗ್ರಾಂ ಬಂಗಾರದ ಆಭರಣಗಳು. ಅದರ ಬೆಲೆ 3.44.000?ಹಾಗೂ50.000?ನಗದುಹಣ. ಒಟ್ಟು 39.4.000 ? ಬೆಲೆ ಬಾಳುವುಗಳನ್ನು, ಕಳವು ಮಾಡಿಕೊಂಡು ಪರಾರಿ ಯಾಗಿರುತ್ತಾರೆಂದು. ದೂರುದಾರರು ನೀಡಿರುವ ಹೇಳಿಕೆಯನ್ನಾಧರಿಸಿ, ಕೂಡ್ಲಿಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

**"ತನಿಖಾ ತಂಡದ ನೇತೃತ್ವ":**

ಈ ಎರೆಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ, ವಿಜಯನಗರ ಜಿಲ್ಲಾ ಎಸ್ಪಿ ರವರ ಮಾರ್ಗದರ್ಶನದಂತೆ. ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ವಿ ಮಲ್ಲಾಪುರ ರವರ ನೇತೃತ್ವದಲ್ಲಿ, ಸಿಪಿಐ ಸುರೇಶ ಹೆಚ್. ತಳವಾರ ಹಾಗೂ ಪಿಎಸ್ಐ ಧನುಂಜಯ ಕುಮಾರವರು. ತಮ್ಮ ಅಪರಾಧ ತನಿಖಾ ತಂಡದೊಂದಿಗೆ, ಪ್ರಕರಣಗಳ ಪತ್ತೆ ಕಾರ್ಯ ಕೈಗೊಂಡಿದ್ದರು.

**"ಆರೋಪಿಗಳು ಅಂದರ್":**

ಪತ್ತೆ ಕಾರ್ಯದಲ್ಲಿ ಯಶಸ್ವಿಯಾಗಿದ್ದು, ಆರೋಪಿಗಳಾದ ಸಂಡೂರು ತಾಲೂಕು ಬೊಮ್ಮಘಟ್ಟೆ ಗ್ರಾಮದ ಅಜ್ಜಯ್ಯ. ಅದೇ ಗ್ರಾಮದ ಮಲ್ಲಿಕಾರ್ಜುನ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಪತ್ತೆ ಮಾಡಿ, ಇವರನ್ನು ಜೂ 19 ರಂದು ದಸ್ತಗಿರಿ ಮಾಡಲಾಗಿರುತ್ತದೆ.

**"ಚಿನ್ನಾಭರಣ ವಶಕ್ಕೆ":**

ಆರೋಪಿತರಿಂದ 20 ಗ್ರಾಂ ತೂಕದ ಬಂಗಾರದ ಚೈನ್ ಸರ, 20 ಗ್ರಾಂ ತೂಕದ ಎರೆಡು ಎಳೆಯ ಬಂಗಾರದ ಸರ, 2 ಗ್ರಾಂ ತೂಕದ ಬಂಗಾರದ ಉಂಗುರ, 10 ಗ್ರಾಂ ತೂಕದ ಬಂಗಾರದ ಬೆಂಡೋಲೆ, 13 ಗ್ರಾಂ ತೂಕದ 2 ಜೊತೆ ಬಂಗಾರದ ಹ್ಯಾಂಗೀಸ್, 13 ಗ್ರಾಂ ತೂಕದ 3 ಬಂಗಾರದ ಸಣ್ಣ ಉಂಗುರಗಳು. ಎಲ್ಲಾ ಒಟ್ಟು 2.34.000 ? ಬೆಲೆಯ ಒಟ್ಟು 78 ಗ್ರಾಂ ಬಂಗಾರದ ಆಭರಣಗಳನ್ನು ಮತ್ತು ಬೈಕ್ ಅನ್ನು ವಶಕ್ಕೆ ಪಡೆಯಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಪತ್ತೆ ಕಾರ್ಯ ಇನ್ನೂ ಮುಂದುವರೆದಿರುತ್ತದೆ ಎಂದು, ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟಪಡಿಸಲಾಗಿದೆ.

**"ತನಿಖಾ ತಂಡ":**

ಪತ್ತೆ ಕಾರ್ಯ ತಂಡದಲ್ಲಿ ಕಾನೂನು ಸುವ್ಯವಸ್ಥೆ ವಿಭಾಗದ, ಸಿ.ಪ್ರಕಾಶ್ ರವರ ಲೀಡರ್ ಶಿಫ್ ನಲ್ಲಿ. ಗುಡೇಕೋಟೆ ಠಾಣೆಯ ಸಿಬ್ಬಂದಿಯಾದ ಅಂಜಿನಪ್ಪ, ಚಂದ್ರಶೇಖರಗೌಡ, ತಿಪ್ಪೇಸ್ವಾಮಿ, ಬಂಡೆ ರಾಘವೇಂದ್ರ, ಮಂಜುನಾಥ, ಶಿವಕುಮಾರ ಭಾಗಿಯಾಗಿ ಪ್ರಕರಣ ಭೇದಿಸಿದ್ದಾರೆಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಲಾಗಿದೆ.

**"ಪೊಲೀಸ್ ವರಿಷ್ಠಾಧಿಕಾರಿಗಳಿಂದ ಪ್ರಶಂಸನೆ":–** ಪ್ರಕರಣ ಭೇದಿಸಲು ಪತ್ತೆಕಾರ್ಯ ಕೈಗೊಂಡು, ಯಶಸ್ವಿಯಾದ ಇಲಾಖಾ ತನಿಖಾಧಿಕಾರಿಗಳಿಗೆ. ಮತ್ತು ಇಲಾಖಾ ಸಿಬ್ಬಂದಿಯವರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಶಂಸೆ ವ್ಯಕ್ತಪಡಿಸಿದ್ದಾರೆಂದು ತಿಳಿದು ಬಂದಿದೆ.

**ಜಿಲ್ಲಾ ವರದಿಗಾರರು ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ ಸಾಲುಮನೆ ಕೂಡ್ಲಿಗಿ**

## ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

**ದೇವರ ಹಿಪ್ಪರಗಿ :** ರಾಜ್ಯ ಕಾಂಗ್ರೆಸ್ ಸರ್ಕಾರ ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಬಿಜೆಪಿ ನಾಯಕರು ಪಟ್ಟಣದಲ್ಲಿ ಇರುವ ರಾಷ್ಟ್ರಹೆದ್ದಾರಿ ಯನ್ನು ಬಂದಮಾಡಿ ಬೈಕ್ ಗೆ ಹಗ್ಗ ಕಟ್ಟಿ ಎಳೆಯುವ ಮುಖಾಂತರ ಪ್ರತಿಭಟನೆ ಮಾಡಿದರು. ಈ ಪ್ರತಿಭಟನೆಯ ನೇತೃತ್ವವಹಿಸಿ ಮಾತಾನಾಡಿ ದೇವರ ಹಿಪ್ಪರಗಿಯ ಮಾಜಿ ಶಾಸಕರಾದ ಸೋಮನಗೌಡ ಪಾಟೀಲ ಸಾಸನೂರ, ಸುಳ್ಳು ಹೇಳುವ ಮೂತಲಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಈಗ ಜನರಿಗೆ ಬೆಲೆ ಏರಿಕೆ ಬರೆ ಎಳೆಯುತ್ತದೆ ,ಕೂಡಲೇ ಪೆಟ್ರೋಲ್



ಡೀಸೆಲ್ ಬೆಲೆ ಕಡಿಮೆ ಮಾಡಬೇಕು ಇಲ್ಲದಿದ್ದರೆ ಮುಂದಿನ ದಿನಗಳು ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು, ಈ ಪ್ರತಿಭಟನೆಯಲ್ಲಿ ಆಗಮಿಸಿದ ಕಂದಾಯ ಇಲಾಖೆಯ ಅಧಿಕಾರಿಗಳಾದ ಸುರೇಶ ಮೌಗೇರಿ ಅವರಿಗೆ ಮನವಿ ಪತ್ರ ಸಲ್ಲಿಸಿದರು, ಈ ಪ್ರತಿಭಟನೆಯಲ್ಲಿ ಬಿಜೆಪಿ ಮಂಡಲ ಅಧ್ಯಕ್ಷರಾದ ಅವ್ವಣ್ಣ ಗ್ವಾತಗಿ, ಪ್ರಧಾನ ಕಾರ್ಯದರ್ಶಿಯಾದ ಪ್ರಕಾಶ ದೊಡ್ಡಮನಿ ಮಹಾಂತೇಶ ಬಿರಾದಾರ ಹಾಗೂ ಮಂಡಲ ಎಲ್ಲಾ ಮೋರ್ಚಾದ ಅಧ್ಯಕ್ಷರು ಹಾಗೂ ಮಂಡಲದ ಎಲ್ಲಾ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಈ ಪ್ರತಿಭಟನೆ ಯಲ್ಲಿ ಭಾಗವಹಿಸಿದರು.

**ತಾಲೂಕ ವರದಿಗಾರರು ಹಾಗೂಎಸ್.ಕೆ ನ್ಯೂಸ್ ಕನ್ನಡ ಚಾನಲ್:ಭೀಮಪ್ಪ ಹಚ್ಯಾಳ ದೇವರ ಹಿಪ್ಪರಗಿ.**

## ಮೋದಿ ಮತ್ತೊಮ್ಮೆ ಪ್ರಧಾನಿಯಾಗಿ ಪ್ರಮಾಣ ವಚನ:
# ಹರಕೆ ತೀರಿಸಿದ ಅಭಿಮಾನಿಗಳು



**ಮನಗೂಳಿ :** ಪಟ್ಟಣದಲ್ಲಿ ಮತ್ತೊಮ್ಮೆ ನರೇಂದ್ರ ಮೋದಿಜೀ ಯವರು ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಮಾಡಿದ ಬಳಿಕ ಬಿಜೆಪಿ ಕಾರ್ಯಕರ್ತರು ನರೇಂದ್ರ ಮೋದಿಯವರ ಅಭಿಮಾನಿಗಳು ಪರಸ್ಪರ ಸಿಹಿ ಹಂಚಿ ಜಯ ಘೋಷ ಹಾಕುವುದರೊಂದಿಗೆ ಸಂಭ್ರಮಿಸಿದರು.

ಲೋಕಸಭಾ ಚುನಾವಣೆ 2024ರ ಫಲಿತಾಂಶ ಏರು–ಪೇರು ನಡೆಯುತ್ತಿರುವಾಗ ಹಳೆಯ ಬಿ.ಜೆ.ಪಿ ಕಾರ್ಯಕರ್ತರು ಪಟ್ಟಣದ ರಾಮೇಶ್ವರ ದೇವರಿಗೆ ಹಾಗೂ ಮಾರುತಿ ದೇವರಿಗೆ ಮೊರೆ ಹೋದರು ಭಕ್ತಿಯಿಂದ ಸಂಕಲ್ಪ ಮಾಡಿಕೊಂಡರು ಮತ್ತೊಮ್ಮೆ ನರೇಂದ್ರ ಮೋದಿಯವರು ಪ್ರಧಾನಮಂತ್ರಿಯಾಗಬೇಕೆಂದು ಭಗವಂತನಲ್ಲಿ ಹರಿಕೆ ಹೊತ್ತರು ಆದ್ದರಿಂದ ಸಂಕಲ್ಪ ಫಲಿಸಿದರಿಂದ ಭಾನುವಾರ ನರೇಂದ್ರ ಮೋದಿಜೀ ಯವರು ದೇಶದ 3ನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಮಾಡಿದ ಬಳಿಕ ಕಾರ್ಯಕರ್ತರು ಅಭಿಮಾನಿಗಳು ಹರಿಕೆ ಹೊತ್ತ ಲಕ್ಷ್ಮಣ ಹಡಪದ ರವರು ಮಾರುತಿ ದೇವಸ್ಥಾನದಿಂದ ರಾಮೇಶ್ವರ ದೇವಾಲಯ ವರೆಗೆ ದೀಡ ನಮಸ್ಕಾರ ಹಾಕಿ ಅಪಾರ ಅಭಿಮಾನಿಗಳ ಸಮ್ಮುಖದಲ್ಲಿ ಹರಿಕೆ ತೀರಿಸಿದರು ನಂತರ ಲಕ್ಷ್ಮಣ ಹಡಪದವರಿಗೆ ಗೌರವಿಸಿದರು.

ಈ ಸಂದರ್ಭದಲ್ಲಿ ರೇವಣಸಿದ್ದ ಮಣೂರ, ಶಿವಾಜಿ ಮೊರೆ, ಹಣಮಂತ ಬದ್ನೂರ, ಮಾಳು ನಾಗರಾಳ, ಸಿದ್ರಾಯ ಕವಟೇಕರ, ಸುಭಾಸ ಲೇಸಪ್ಪಗೋಳ, ಪುಟ್ಟು ತೇಲಿ, ಅಡಿವಯ್ಯ ವಿಭೂತಿ, ಶರಣಯ್ಯ ಗಿಡ್ಡಿ, ಪ್ರವೀಣ ಹಡಪದ,
ಉಮೇಶ ನಾವಿ, ಗಡ್ಡೆಪ್ಪ ಎಲೇರಿ, ಮಾಂತು ಅಗಸರ, ಪುಟ್ಟು ಕೆಂಗಣಗುತ್ತಿ, ವೃಷಭ ಲೇಸಪ್ಪಗೋಳ, ಜಗದೀಶ ಅರುಟಗಿ, ಬಸವರಾಜ ಅಲಗೊಂಡ, ಮಲ್ಲು ನಾಟಿಕಾರ ಇನ್ನೂ ಅಪಾರ ಅಭಿಮಾನಿಗಳು ಉಪಸ್ಥಿತರಿದ್ದರು.

# ಫಸಲ ಭೀಮಾ ಯೋಜನೆಯಡಿ ನಷ್ಟಗೊಂಡ ರೈತರಿಗೆ ವಿಮಾ ಪರಿಹಾರಕ್ಕೆ ಆಗ್ರಹ
## ಫಸಲ ವಿಮೆಯಿಂದ ರೈತರಿಗೆ ಭಾರಿ ಪ್ರಮಾಣ ಮೋಸ: ಸಂಗಮೇಶ ಸಗರ ಆರೋಪ

**ವಿಜಯಪುರ :** ಜಿಲ್ಲೆಯಲ್ಲಿ ಅನೇಕ ರೈತರು 2023–24 ನೇ ಸಾಲಿನ ಮುಂಗಾರು ಹಂಗಾಮಿನ ಫಸಲ ಭೀಮಾ ಯೋಜನೆಯನ್ನು ತುಂಬಿದ್ದು, ಅಂತವರಲ್ಲಿ ಅನೇಕ ರೈತರು ಬರಗಾಲದಿಂದ ಮಳೆ ಬಾರದೇ ನಷ್ಟ ಅನುಭವಿಸಿದ್ದಾರೆ, ವಿಮೆ ಹಣ ಬಾರದೇ ಚಿಂತೆಗಿಡಾದ ರೈತರು ಅಧಿಕಾರಿಗಳಿಗೆ ಕೇಳಿದರೆ ಮುಂಗಡ ವಿಮೆ ಹಣ ನೀಡಿದ್ದೇವೆ, ಉಳಿದ ಹಣ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ ಕೂಡಲೇ ವಿಮೆ ತುಂಬಿದ ಎಲ್ಲ ರೈತರಿಗೂ ಪರಿಹಾರ ನೀಡಬೇಕೆಂದು ಜಂಟಿ ನಿರ್ದೇಶಕರಾದ ರಾಜಶೇಖರ ವಿಲಿಯಮ್ಸ್ ಅವರಿಗೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಮನವಿ ಸಲ್ಲಿಸಲಾಯಿತು.



ರೈತ ಸಂಘದ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮನವಿ ಸಲ್ಲಿಸಿ ಮಾತನಾಡುತ್ತಾ ಈ ವರ್ಷ ರಾಜ್ಯ ಸರಕಾರವೇ ಜಿಲ್ಲೆಯ ಎಲ್ಲಾ 13 ತಾಲೂಕುಗಳು ಸಂಪೂರ್ಣ ಬರ ಎಂದು ಘೋಷಣೆ ಮಾಡಿರುತ್ತದೆ, ಆದರೆ ಫಸಲ ಭೀಮಾ ಯೋಜನೆ ಅಡಿಯಲ್ಲಿ ನಷ್ಟ ಅನುಭವಿಸಿಲ್ಲ ಎಂದು, ನಿಮಗೆ ಪರಿಹಾರ ಬರುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ, ಇದ–ರಿಂದ ರೈತರು ಕಂಗಾಲಾಗಿದ್ದಾರೆ, ಕೂಡಲೇ ಇದನ್ನು ಇನ್ನೊಮ್ಮೆ ಪರಶೀಲಿಸಿ ವಿಮೆ ತುಂಬಿದ ಎಲ್ಲಾ ರೈತರಿಗೂ ವಿಮಾ ಪರಿಹಾರ ನೀಡಬೇಕು, ಇಲ್ಲವಾದಲ್ಲಿ ನಿಮ್ಮ ಇಲಾಖೆಯ ಮುಂದುಗಡೆ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಮಾಡಬೇಕಾಗುವುದು ಎಂದು ಜಂಟಿ ನಿರ್ದೇಶಕರಿಗೆ 15 ದಿನಗಳ ಗಡವು ನೀಡಿ ಮನವಿ ಸಲ್ಲಿಸಿದರು

ಜಿಲ್ಲೆಯ ಕವಲಗಿ ಗ್ರಾಮದಲ್ಲಿ 91% ನಷ್ಟವಾಗಿದೆ ಎಂದು ಹೇಳುವ ಅಧಿಕಾರಿಗಳು ಕೇವಲ 3 ಕಿ.ಮೀ ಪಕ್ಕದ ಹಡಗಲಿ ಗ್ರಾಮದಲ್ಲಿ 10% ನಷ್ಟವಾಗಿದೆ ಎಂದು ವರದಿ ಕಳಿಸಿದ್ದಾರೆ, ಜುಮನಾಳ, ಡೋಣೂರ, ಎಂಭತ್ನಾಳ, ಬೆಕಿನಾಳ, ಕಲಕೇರಿ ಸೇರಿದಂತೆ ಹಲವಾರು ಗ್ರಾಮಗಳು ವಿಮೆಯಿಂದ ವಂಚಿತವಾಗಿವೆ, ಒಟ್ಟಾರೆಯಾಗಿ ಈ ಫಸಲ ಭೀಮಾ ಯೋಜನೆಯೂ ಅವೈಜ್ಞಾನಿಕವಾದದು ಮತ್ತು ಪಾರದರ್ಶಕವಾಗಿಲ್ಲ, ಇಲ್ಲಿ ವಿಮೆ ಕಂಪನಿಯವರು ಹಾಗೂ ಸಂಬಂಧಿಸಿದ ಅಧಿಕಾರಿಗಳ ಕೈವಾಡದಿಂದ ವಿಮೆಯಲ್ಲಿ ಸಾಕಷ್ಟು ಪ್ರಮಾಣದ ಮೋಸವಾಗಿದೆ, ಇದು ನಿಲ್ಲಬೇಕು ಖಾಸಗಿ ವಿಮೆ ಕಂಪನಿಯವರಿಗೆ ಈ ಯೋಜನೆಯಿಂದ ಹೊರಗಿಟ್ಟು ಸರಕಾರವೇ ವಿಮೆ ತುಂಬಿಕೊಳ್ಳಬೇಕು, ಇಲ್ಲ ನಮ್ಮ ಜಿಲ್ಲೆಯಲ್ಲಿ ಫಸಲ ಭೀಮಾ ಯೋಜನೆಯಿಂದ ಕೃಷಿ ಇಲಾಖೆ, ಜಿಲ್ಲಾಡಳಿತ ಪ್ರಚಾರ ನಿಲ್ಲಿಸಿ ಎಂದು ಅವರು ಆಗ್ರಹಿಸಿದರು.

ಈ ವೇಳೆ ಜಿಲ್ಲಾ ಗೌರವಾಧ್ಯಕ್ಷ ಕಲ್ಲಪ್ಪ ಪಾರಶೆಟ್ಟಿ, ತಾ.ಅಧ್ಯಕ್ಷರಾದ ಮಹಾದೇವಪ್ಪ ತೇಲಿ, ಹಡಗಲಿ ಅಧ್ಯಕ್ಷರಾದ ಅಶೋಕ ಕನ್ನೂರ, ಉಪಾಧ್ಯಕ್ಷರಾಗಿ ಬಸವರಾಜ ಹಡಪದ, ಸಿದ್ದನಗೌಡ ಬಿರಾದಾರ, ಮಲಕು ಅಕ್ಕಿಹುಗ್ಗಿ, ಶರಣಬಸು ಇಂಡಿ, ಸುಖಾನಂದ ಗಂಗಶೆಟ್ಟಿ, ಶ್ರೀಕಾಂತ ಬೆಳ್ಳುಬ್ಬಿ, ಈರಪ್ಪ ಅಕ್ಕಿಹುಗ್ಗಿ, ಪರಸು ಚಿಕ್ಕಲಕಿ, ರೇವಣಸಿದ್ದ ಹಾದಿಮನಿ, ರುದ್ರಯ್ಯ ಸ್ಥಾವರಮಠ, ಮಲ್ಲಿಕಾರ್ಜುನ ಬಳವಲದ, ಸಿದ್ದು ಗಂಗಶೆಟ್ಟಿ, ಸಂಗಮೇಶ ಪತ್ತಾರ, ಶರಣಬಸ್ಸು ಗಂಗಶೆಟ್ಟಿ, ಶ್ರೀಶೈಲ ಕಾಳಗಿ, ಬಸವರಾಜ ಹಜೇರಿ, ಸಂತೋಷ ಹಂಚನಾಳ, ರಾಮು ಪಡಗಾನೂರ, ಯಲ್ಲಪ್ಪ ಕರಬಂಟನಾಳ, ಮಲ್ಲು ಬಿರಾದಾರ, ಸಿದ್ದಯ್ಯ ಮಠಪತಿ, ಭೀಮನಗೌಡ ಬಿರಾದಾರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಮಳೆಯಿಂದ 9 ಮನೆಗೆ ಹಾನಿ



**ಕೊಲ್ಹಾರ :** ತಾಲೂಕಿನ ಮಟ್ಟಿಹಾಳ ಮಳೆ ಮಾಪನ ಕೇಂದ್ರದಲ್ಲಿ 58.0 ಮೀ.ಮಿ. ಮಳೆ ದಾಖಲಾಗಿದೆ. ಇದರಿಂದಾಗಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಒಟ್ಟು 9 ಮನೆಗಳು ಬಿದ್ದು ಹಾನಿಯಾಗಿದ್ದು. ಹಾಗೂ ಕೂಡಗಿಯ ಎ.ಟಿ.ಪಿ.ಸಿ.ಲೇಬರ ಕ್ಯಾಂಪ ಹತ್ತಿರ ನಿರ್ಮಿಸಿದ ಹಳೆಯ ಕಟ್ಟಡದ ಗೋಡೆ ಹತ್ತಿರ ಮಳೆಯಿಂದ ಆಶ್ರಯ ಪಡೆದ 9 ಕುರಿಗಳು ಸಾವನ್ನಪಿರುತ್ತವೆ. ಎಂದು ತಹಶೀಲ್ದಾರ್ ಎಸ್ ಎಸ್ ನಾಯಕಲಮಠ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸ್ವಯಂ ಪ್ರೇರಿತ ರಕ್ತದಾನ ಶಿಬಿರ

**ಬೆಳಗಾವಿ :** ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕು.ಕ. ಇಲಾಖೆ, ಬೆಂಗಳೂರಿನ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನಷನ್ ಸೊಸೈಟಿ, ಜಿಲ್ಲಾ ಏಡ್ಸ್ ನಿರೋಧಕ ಮತ್ತು ನಿಯಂತ್ರಣ ಘಟಕ, ಬಿಮ್ಸ್ ರಕ್ತ ಭಂಡಾರ ಹಾಗೂ ಸೈನಿಕ ಆಸ್ಪತ್ರೆ ಇವರ ಸಂಯುಕ್ತಶ್ರಾಯದಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ಬ್ರಿಗೇಡಿಯರ್ ಜ್ವಾಯ್‌ದೀಪ್ ಮುಖರ್ಜಿ ಸ್ಟೇಷನ್ ಕಮಾಂಡರ್ ಮತ್ತು ಕರ್ನಲ್ ಎಮ್ ಎನ್ ರಜನಿ ಕಮಾಂಡಿಂಗ್ ಆಫೀಸರ್ ಹಾಗೂ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳು ಡಾ.ಚಾಂದನಿ ದೇವಡಿ ಶಿಬಿರವನ್ನು ಉದ್ಘಾಟಿಸಿದರು.

ಈ ವೇಳೆ ಬ್ರಿಗೇಡಿಯರ್ ಜ್ವಾಯ್‌ದೀಪ್ ಮುಖರ್ಜಿ ಸ್ಟೇಷನ್ ಕಮಾಂಡರ್ ಇವರು ಸಹಿತ ರಕ್ತದಾನ ಮಾಡಿದರು. ನಿರ್ದೇಶಕರು ಡಾ.ಅಶೋಕಕುಮಾರ ಶೆಟ್ಟಿ,

ಜಿಲ್ಲಾ ಶಸ್ತ್ರ ಚಿಕಿತ್ಸಕರು ಡಾ.ವಿಠ್ಠಲ ವಿ ಶಿಂಧೆ, ವೈದ್ಯಕೀಯ ಅಧೀಕ್ಷಕರು ಡಾ.ಪಲ್ಲೇದ, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಡಾ.ಬಿ ಎನ್ ತುಕ್ಕಾರ, ಡಾ.ಆರ್. ಜಿ. ಪಾಟೀಲ, ವೈದ್ಯಾಧಿಕಾರಿಗಳು ಡಾ.ಶ್ರೀದೇವಿ ಬಭೂತಿ, ಬಿಮ್ಸ್ ರಕ್ತ ಬಂಡಾರ ಹಾಗೂ ಡ್ಯಾಪ್ಕೋ ಸಿಬ್ಬಂದಿಯವರು ಉಪಸ್ಥಿತರಿದ್ದರು.

# ಚಾಲಕ ದಿನಾಚರಣೆ: ಆರೋಗ್ಯ ತಪಾಸಣೆ

**ಝುಳಕಿ :** ಸಮೀಪದ ಬಳ್ಳೊಳ್ಳಿ ಗ್ರಾಮದ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ಸ್ವಾಗತ (ವಿನಾಯಕ) ಪೆಟ್ರೋಲಿಯಂ ಆವರಣದಲ್ಲಿ ಚಾಲಕರ ಮತ್ತು ಇಂಡಿಯನ್ ಆಯಿಲ್ ಸಿ.ಜಿ.ಎಮ್.ಆರ್. ಎಸ್ ಅಶೋಕ್ ರಮನಾನಿ ಸಹಯೋಗದಲ್ಲಿ ಚಾಲಕರ ದಿನಾಚರಣೆ ಕೇಕ್ ಕತ್ತರಿಸುವ ಮೂಲಕ ಚಾಲನೆ ನೀಡಲಾಯಿತು.

ಚಾಲಕರು ನಮ್ಮ ದಿನಚರಿ ಮತ್ತು ನಮ್ಮ ಆರೋಗ್ಯ ಸಾಮಗ್ರಿಗಳು, ದಿನಬಳಕೆ ವಸ್ತುಗಳು ಸಮಯಕ್ಕೆ ಸರಿಯಾಗಿ ತಲುಪಿಸುವಲ್ಲಿ ಬಹು ಮುಖ್ಯ ಪಾತ್ರ , ಚಾಲಕರು ನಮಗೆ ಬಹಳ ಮುಖ್ಯ, ಆದ್ದರಿಂದ ನಮ್ಮ ಇಂಡಿಯನ್ ಆಯಿಲ್ ಸಂಸ್ಥೆ ಸುಮಾರು ಸ್ವಾಗತ ಬಂಕನಲ್ಲಿ ಚಾಲಕರ ಸಲುವಾಗಿ 50 ಶೌಚಾಲಯ, 100 ಮಲಗಲು ಬೆಡ್ ರೂಮಗಳು, ಸ್ನಾನ ಗೃಹ, ಬಟ್ಟೆ ತೊಳೆಯಲು ವಾಷಿಂಗ್ ಮಷಿನ್, ವಾಹನಗಳು ನಿಲ್ಲಲು ಪಾರ್ಕಿಂಗ್, ಚಾಲಕರ ಆರೋಗ್ಯ ತಪಾಸಣೆ ವ್ಯವಸ್ಥೆ ಮಾಡಿದ್ದೇವೆ ಎಂದು ಸಿ.ಜಿ.ಎಮ್.ಆರ್.ಎಸ್.ಅಶೋಕ್ ರಮನಾನಿ ಮಾತನಾಡಿದರು.

ಇದು ಕೇವಲ ಚಾಲಕರ ದಿನಾಚರಣೆ ದಿನಮಾತ್ರವಲ್ಲ, ದಿನಾಲೂ ನಮ್ಮ ಬಂಕಿನಲ್ಲಿ ಈ ಎಲ್ಲ ವ್ಯವಸ್ಥೆ ಚಾಲಕರ ಸಲುವಾಗಿ ಪಾರ್ಕಿಂಗನಲ್ಲಿ ಮನೋರಂಜನೆ ಸಲುವಾಗಿ ಟಿವಿ ವ್ಯವಸ್ಥೆ ಕೂಡಾ ಮಾಡಗಿದೆ ಎಂದರು.

ಡಿ.ಜಿ.ಎಮ್.ಆರ್.ಎಸ್.ಸುನಿಲ್ ಮಿಶ್ರಾ, ಆಯ್ , ಓ. ಸಿ. ಎಲ್. ಮ್ಯಾನೇಜರ್ ಬೆಲಾಗಮ್ ಮೋಹನ ಕ್ರಿಷ್ಣಾ, ಆರ್. ಎಮ್. ಓ. ಬೆಲಗಾಮ್ ರಾಮ ಬಾಬು, ಸೇಲ್ಸ ಆಫೀಸರ್ ರಾಜ ವರ್ಜರಿ, ಮಾಲೀಕರಾದ ಪೂರ್ಣಚಂದ್ರ ರಾವ್, ರಾಜೇಶ್ ರಾವ್, ಅಭಿಷೇಕ್ ರಾವ್, ಶಶಿಕಾಂತ ರಾವ್, ಝುಳಕಿ ಆರೋಗ್ಯ ಅಧಿಕಾರಿ ಸತೀಶ್ ಪಾಟೀಲ್, ಸಮುದಾಯ ಆರೋಗ್ಯ ಅಧಿಕಾರಿ ಸಾಗರ ಬಂಡೇನವರ, ಸುಶ್ರೂಕಿಯ ಅಧಿಕಾರ ವಿದ್ಯಾಶ್ರೀ ದುರ್ಗ, ಪ್ರಯೋಗ ಅಧಿಕಾಋಇ ಇಸ್ಮಾಯಿಲ್ ಮುಲ್ಲಾ, ಆರೋಗ್ಯ ನಿರಿಕ್ಷಕರು ಸಿದ್ದು ರೂಗಿ, ಸಿಬ್ಬಂದಿ ಹಣಮಂತ ಯಡವಲ್ಲಿ, ಎರ್ರಿ ಸ್ವಾಮಿ, ಸುನಿಲ್ ರೆಡ್ಡಿ, ಬಿಳೆಣ್ಣಿ, ಶರಣಯ್ಯ ಮಠಪತಿ ಹಾಗೂ ಚಾಲಕರು ಉಪಸ್ಥಿತರಿದ್ದರು .

# ರಕ್ತದಾನದಿಂದ ದೇಹ ಶುದ್ಧಿಯಾಗುತ್ತದೆ



**ರಬಕವಿ :** ರಕ್ತದಾನದಿಂದ ದೇಹದಲ್ಲಿ ಹೊಸ ರಕ್ತ ವೃದ್ಧಿಯಾಗುವುದರಿಂದ ದೇಹವು ಶುದ್ಧಿಯಾಗುತ್ತದೆ. ಆದ್ದರಿಂದ 18 ರಿಂದ 50 ವರ್ಷದ ಆರೋಗ್ಯವಂತ ವ್ಯಕ್ತಿಗಳು ರಕ್ತದಾನ ಮಾಡಬಹುದಾಗಿದೆ ಎಂದು ರಬಕವಿಯ ಡಾ. ಜಿ. ಎಚ್. ಚಿತ್ತರಗಿ ತಿಳಿಸಿದರು.

ಶುಕ್ರವಾರ ಇಲ್ಲಿನ ಭಾರತ ಗ್ಯಾಸ್ ಸೇವಾ ಸಂಸ್ಥೆಯವರು ವಿಶ್ವ ರಕ್ತದಾನಿಗಳ ದಿನಾಚರಣೆಯ ಸಂದರ್ಭದಲ್ಲಿ ಅವರು ಮಾತನಾಡಿದರು.

ಶಿಕ್ಷಕ ಮಲ್ಲಿಕಾರ್ಜುನ ಗಡೆನ್ನವರ, ರಕ್ತದಾನದಿಂದ ಸಮಾಜ ಸೇವೆ ಸಾಧ್ಯ ಮತ್ತು ರಕ್ತ ದಾನದಿಂದ ಮತ್ತೊಬ್ಬ ವ್ಯಕ್ತಿಯ ಜೀವವನ್ನು ಉಳಿಸಿದ ಭಾಗ್ಯ ನಮ್ಮದಾಗುತ್ತದೆ. ಆದ್ದರಿಂದ ಆರೋಗ್ಯವಂತ ವ್ಯಕ್ತಿಗಳು ನಿಯಮಿತವಾಗಿ ರಕ್ತದಾನ ಮಾಡಬೇಕು ಎಂದು ತಿಳಿಸಿದರು.

ಭಾರತ ಗ್ಯಾಸ್ ಸೇವಾ ಸಂಸ್ಥೆಯ ಸೋಮಶೇಖರ ದುಂಡಪ್ಪ ಕೊಟ್ಟರಶೆಟ್ಟಿ ಮಾತನಾಡಿ, ಆಸಂಗಿ ಗ್ರಾಮದ ಬಸವರಾಜ ಕೊಕಟನೂರ 63 ಸಲ ಮತ್ತು ಮಲ್ಲಿಕಾರ್ಜುನ ತುಂಗಳ ಇದುವರೆಗೆ 27 ಸಲ ರಕ್ತದಾನ ಮಾಡಿ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಮುಧೋಳದ ರಾಮನಗೌಡ ಆಸ್ಪತ್ರೆಯ ಸಹಯೋಗದೊಂದಿಗೆ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು.

ವಕೀಲರಾದ ವೆಂಕಟೇಶ ನಿಂಗಸಾನಿ, ಸಂಗಮೇಶ ಗುಣಕಿ, ಪ್ರಶಾಂತ್ ಬಿಳ್ಳೂರ, ಸಂಗಮೇಶ ಚಿತ್ತರಗಿ, ಪೂಜಾ ಕೋಪರ್ಡೆ, ಮಧುಲಿಕಾ ಆಸಂಗಿ, ವರ್ಷಾ ಸತಾರೆ, ಅಬೂಬಕರ್ ಬಂಡೆಬುರಜ್, ಕಿರಣ ಆಳಗಿ, ವಿಶ್ವಜ ಕಾಡದೇವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಿ



**ರಬಕವಿ–ಬನಹಟ್ಟಿ :** ಸರ್ಕಾರದಿಂದ ಪಿಂಚಣಿ ಆದೇಶ ಪ್ರತಿಗಳನ್ನು ಪಡೆದುಕೊಂಡವರು ಮುಂದಿನ ದಿನಗಳಲ್ಲಿ ಸರ್ಕಾರದ ಸೌಲಭ್ಯವನ್ನು ಪಡೆದುಕೊಂಡು, ಅದನ್ನು ಸದ್ಬಳಕೆ ಮಾಡಿಕೊಳ್ಳುವುದರ ಜೊತೆಗೆ ಉತ್ತಮ ಜೀವನ ನಡೆಸಬೇಕು ಎಂದು ತೇರದಾಳ ತಹಶೀಲ್ದಾರ ವಿಜಯಕುಮಾರ ಕಡಕೋಳ ತಿಳಿಸಿದರು.

ಅವರು ಶುಕ್ರವಾರ ರಬಕವಿಯ ಕಂದಾಯ ಇಲಾಖೆಯ ಕಾರ್ಯಾಲಯದಲ್ಲಿ ನಡೆದ ಪಿಂಚಣಿ ದಿನದ ಅಂಗವಾಗಿ ಫಲಾನುಭವಿಗಳಿಗೆ ಆದೇಶ ಪ್ರತಿಗಳನ್ನು ವಿತರಣೆ ಮಾಡಿ ಮಾತನಾಡಿದರು. ಪಿಂಚಣಿ ಸೌಲಭ್ಯ ಪಡೆದುಕೊಳ್ಳುವವರು ತಹಶೀಲ್ದಾರ್ ಕಾರ್ಯಾಲಯಕ್ಕೆ ಭೇಟಿ ನೀಡಿ ಸಂಬಂಧಪಟ್ಟ ಮಾಹಿತಿಯನ್ನು ಪಡೆದುಕೊಂಡು ಸೂಕ್ತ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯನ್ನು ಸಲ್ಲಿಸುವಾಗ ಯಾವುದೇ ಮಧ್ಯವರ್ತಿಗಳ ಸಹಾಯ ಪಡೆದುಕೊಳ್ಳಬೇಡಿ ಎಂದು ತಹಶೀಲ್ದಾರ್ ಕಡಕೋಳ ತಿಳಿಸಿದರು. ಶಿರಸ್ತೆದಾರ ಎಸ್. ಎಂ. ಕೂಗಾಟೆ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಗ್ರಾಮ ಆಡಳಿತಾಧಿಕಾರಿ ಸದಾಶಿವ ಕುಂಬಾರ, ಸುಭಾಸ ಬಸಪ್ಪಗೋಳ ರೈತ ಮುಖಂಡ ಹೊನ್ನಪ್ಪ ಬಿರಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಲ್ಲಿ ಮತದಾನದ ಜಾಗೃತಿ ಅಗತ್ಯ


**ರಬಕವಿ–ಬನಹಟ್ಟಿ :** ಇಂದಿನ ವಿದ್ಯಾರ್ಥಿಗಳು ದೇಶದ ಭಾವೀ ಭವ್ಯ ನಾಗರಿಕರು. ಆದ್ದರಿಂದ ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ಮತ್ತು ಮತದಾನದ ಕುರಿತು ಜಾಗೃತಿ ಮೂಡಿಸುವುದು ಮುಖ್ಯವಾಗಿದೆ ಎಂದು ತೇರದಾಳದ ತಹಶೀಲ್ದಾರ್ ವಿಜಯಕುಮಾರ ಕಡಕೋಳ ತಿಳಿಸಿದರು.

ಶುಕ್ರವಾರ ಇಲ್ಲಿನ ಪೂರ್ಣ ಪ್ರಜ್ಞೆ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾದ ವಿದ್ಯಾರ್ಥಿ ಸಂಸತ್ತಿಗೆ ನಡೆದ ಮತದಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಂಸ್ಥೆಯ ಕಾರ್ಯದರ್ಶಿ, ಶಕೀಲ ನದಾಫ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಮತದಾನದ ಮಹತ್ವ ತಿಳಿಸುವ ನಿಟ್ಟನಲ್ಲಿ ಶಿಕ್ಷಕರ ಸಹಾಯದಿಂದ ನೂತನ ಪ್ರಯೋಗವನ್ನು ಮಾಡಲಾಗಿದೆ. ಮೊಬೈಲ್ ಮೂಲಕ ಇವಿಎಂ ಯಂತ್ರಗಳನ್ನು ನಿರ್ಮಾಣ ಮಾಡಿ ವಿದ್ಯಾರ್ಥಿಗಳಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ಮತದಾನದ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಸಂಸ್ಥೆಯ ಉಪ ಕಾರ್ಯಾಧ್ಯಕ್ಷ ರಾಮದಾಸ ಸಿಂಗನ್, ಮುಖ್ಯ ಶಿಕ್ಷಕಿ ಶ್ರೀಮತಿ ಬೌರಮ್ಮ ಆರ್. ಬಾಗಲಕೋಟ, ಪ್ರಾಚಾರ್ಯ ಅದೃಶ್ಯಯ್ಯ ಕಾಡದೇವರ, ಸುಭಾಸ ಹಟ್ಟಿ, ಎಂ. ಆರ್. ಮುಲ್ಲಾ,
ಬಿ.ಎಂ. ಮಠದ, ಪೊಲೀಸ್ ಇಲಾಖೆಯ ಧರೆಪ್ಪ ಕುಂಬಾರ, ಗಜಾನನ
ಸಿಂಗನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಕೃಷ್ಣಾ ನದಿಯಲ್ಲಿ ಮುಳುಗಿ ಮೀನುಗಾರ ಸಾವು
## ಮಗಳ ಕಣ್ಮುಂದೆಯೇ ತಂದೆ ಸಾವು



**ರಬಕವಿ–ಬನಹಟ್ಟಿ :** ಮೀನು ಹಿಡಿಯಲು ಹೋದ ಮೀನುಗಾರನೊಬ್ಬ ಮೀನಿನ ಬಲಿ ಕಾಲಿಗೆ ಸಿಲುಕಿ ಕೃಷ್ಣಾ ನದಿಯಲ್ಲಿ ಮುಳುಗಿ ಜೀವ ಕಳೆದುಕೊಂಡ ಘಟನೆ ರಬಕವಿ–ಬನಹಟ್ಟಿ ತಾಲೂಕಿನ ರಬಕವಿ–ಬನಹಟ್ಟಿ ಸಮೀಪದ ಕೃಷ್ಣಾನದಿಯಲ್ಲಿ ನಡೆದಿದೆ.

ತಾಲೂಕಿನ ಕುಲಹಳ್ಳಿ ಗ್ರಾಮದ ಬಾವುಸಾಬ ಬಾಗಡೆ(42) ಮೃತ ವ್ಯಕ್ತಿ. ಈತ ಮೀನುಗಾರಿಕೆ ವೃತ್ತಿ ಮಾಡುತ್ತಿದ್ದ ಬಾವುಸಾಬ ಎಂದಿನಂತೆ ಶನಿವಾರ ಬೆಳಿಗ್ಗೆ ಸಮೀಪದ ಮಹಿಷವಾಡಗಿ ಸೇತುವೆ ಬಳಿ ಕೃಷ್ಣಾ ನದಿಯಲ್ಲಿ ಮೀನು ಹಿಡಿಯಲು ಹೋಗಿದ್ದ ಹಿಂದಿನ ದಿನ ಬಲೆ ಹಾಕಿ ಮರುದಿನ ಬಲಿ ತೆಗೆಯುವ ವೇಳೆ ಕಾಲಿಗೆ ಸಿಲುಕಿ ನೀರಲ್ಲಿ ಮಳುಗಿ ಸಾವನ್ನಪ್ಪಿದ್ದಾನೆ. ಈಜುಗಾರರ ತಂಡದ ಸಹಾಯದಿಂದ ಶವಕ್ಕಾಗಿ ಶೋಧ ನಡೆಸಿದ್ದು, ಸ್ಥಳಕ್ಕೆ ಬನಹಟ್ಟಿ ಪೊಲೀಸರು ಕಂದಾಯ ಇಲಾಖೆ ಭೆಟ್ಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮಗಳ ಎದುರೇ ಸಾವು:10 ವರ್ಷದ ಬಾಲಕಿ ತನ್ನ ತಂದೆಯೊಂದಿಗೆ ನದಿಗೆ ಬಂದಿದ್ದಾಳೆ. ತಂದೆ ಬಾವುಸಾಬ ಮೀನಿಗೆ ಹಾಕಿದ ಬಲೆಯನ್ನು ತರುವುದಾಗಿ ತಿಳಿಸಿ ನದಿ ತೀರದಲ್ಲಿ ಕಾಯುವಂತೆ ಕೂಡ್ರಿಸಿದ್ದಾನೆ. ನದಿಯೊಳಗೆ ಹೋಗಿ ಬಲಿ ತೆಗೆಯುತ್ತಿದ್ದಂತೆ ನೀರಿನಲ್ಲಿ ಮುಳುಗುತ್ತಿದ್ದಂತೆ ಮಗಳ ನಿಸ್ಸಾಹಯಕತೆಯಿಂದ ಮಗಳ ಕಣ್ಮುಂದೆಯೇ ತಂದೆ ನೀರಿನಲ್ಲಿ ಮುಳಿಗಿರುವದು ದುರದೃಷ್ಟ.

# ಪ್ರತಿ ಮನೆಯಿಂದ ಒಬ್ಬ ಯುವಕನಾದರೂ ಯೋಧರಾಗಬೇಕು

**ಬನಹಟ್ಟಿ :** ಇಂದು ನಾವು ನೀವೆಲ್ಲರೂ ನಮ್ಮ ಮನೆಯಲ್ಲಿ ಬೆಚ್ಚಗೆ ನೆಮ್ಮದಿಯಿಂದ ಮಲಗಿದ್ದೇವೆ ಎಂದರೆ ಅದಕ್ಕೆ ಪ್ರಮುಖ ಕಾರಣ ನಮ್ಮ ದೇಶದ ಗಡಿ ಕಾಯುತ್ತಿರುವ ಸೈನಿಕರಿಂದ ಹೊರತಾಗಿ ನಮ್ಮ ಹಣ ಆಸ್ತಿಯಿಂದಲ್ಲ. ಆದ್ದರಿಂದ ಪ್ರತಿಯೊಂದು ಮನೆಯಿಂದ ಒಬ್ಬ ಯುವಕನಾದರೂ ಯೋಧರಾಗಿ ಸೇವೆ ಸಲ್ಲಿಸುವ ವ್ಯವಸ್ಥೆಯಾಗಬೇಕು ಎಂದು ತಾಲೂಕಿನ ಹಿಂದುಪರ ಸಂಘಟನೆಯ ಮುಖಂಡ ಶಿವಾನಂದ ಗಾಯಕವಾಡ ತಿಳಿಸಿದರು.



ಗುರುವಾರ ರಾತ್ರಿ ಬನಹಟ್ಟಿ ಕಾಡಸಿದ್ಧೇಶ್ವರ ದೇವಸ್ಥಾನದ ಆವರಣದಲ್ಲಿ ಅವಳಿ ನಗರದ ಕಾಡಸಿದ್ಧೇಶ್ವರ ಕಾರ್ಮಿಕ ಸಂಘದ ಅಡಿಯಲ್ಲಿ ಕಾರ್ಮಿಕರಿಬ್ಬರ ಮಕ್ಕಳಾದ ಲೋಕೇಶ ಸಿದ್ದಪ್ಪ ವಗ್ಗ, ಅಕ್ಷಯ ಆನಂದ ಭಜಂತ್ರಿ ಈರ್ವರು ಸೇನೆಗೆ ಸೇರ್ಪಡೆಗೊಂಡಿದ್ದು, ಸೇವೆಗೆ ಹಾಜರಾಗಲು ತೆರಳುವ ಸಂದರ್ಭದಲ್ಲಿ ಅವರನ್ನು ಬೀಳ್ಕೊಟ್ಟು ಸನ್ಮಾನಿಸಿ ಗೌರವಿಸಿ ಮಾತನಾಡಿದರು. ಇಲ್ಲಿಯವರೆಗೆ ಜನ್ಮ ನೀಡಿದ ತಾಯಿಯ ಸೇವೆ ಮಾಡಿದ ನೀವು ಇನ್ನು ಮುಂದೆ ಭಾರತ ಮಾತೆಯ ಸೇವೆಗೆ ತೆರಳುವ ನಿಮಗೆ ನಮ್ಮೂರಿನ ಎಲ್ಲರ ಪರವಾಗಿ ನಿಮಗೊಂದು ಸಲಾಮ್. ಯಾವುದೋ ಜನ್ಮದ ಪುಣ್ಯದ ಕರ್ಮದ ಫಲದಿಂದ ದೇಶ ಸೇವೆ ಮಾಡುವ ಭಾಗ್ಯ ದೊರಕಿರುತ್ತದೆ. ಅದು ಎಲ್ಲರಿಗೂ ದೊರಕುವುದಿಲ್ಲ. ಅದೊಂದು ಸಾಕ್ಷಾತ್ ದೇವರ ಸೇವೆ ಮಾಡಿದಷ್ಟೇ ಸಮಾನ ಎಂದರು.

ಪತ್ರಕರ್ತ ಬಸಯ್ಯ ವಸ್ತ್ರದ ಮಾತನಾಡಿ, ಕಾರ್ಮಿಕ ಸಂಘದ ಸದಸ್ಯರಾದ ಆನಂದ ಭಜಂತ್ರಿಯವರು ತಮ್ಮ ನಿತ್ಯದ ಹಮಾಲಿ ಕೆಲಸ ಮಾಡಿ ಬಂದ ಹಣದಲ್ಲಿ ಅಕ್ಷಯನಿಗೆ ಉತ್ತಮ ಶಿಕ್ಷಣ ನೀಡಿ ಸೈನಿಕ ವೃತ್ತಿಗೆ ಸೇರ್ಪಡೆ ಮಾಡಿದ್ದು , ನಿಜಕ್ಕೂ ಶ್ಲಾಘನೀಯ. ಇನ್ನೋರ್ವ ಸೈನಿಕ ಲೋಕೇಶ ಚಿಕ್ಕ ವಯಸ್ಸಿನಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡಿದ್ದು, ಅಜ್ಜ ಮಲ್ಲಪ್ಪ ವಗ್ಗ ಕೂಡಾ ಹಮಾಲಿ ಕೆಲಸ ಮಾಡುತ್ತಾ, ಅವರ ಕುಟುಂಬದ ಮಾರ್ಗದರ್ಶನದಲ್ಲಿ ಉತ್ತಮ ಶಿಕ್ಷಣ ಪಡೆದು ಸೇನೆಗೆ ಆಯ್ಕೆಯಾಗಿದ್ದು ಸಂತಸದ ಸಂಗತಿ.

ಅವರಿಗೆ ಇಂದು ಗೌರವಿಸಿದ್ದು ನಮಗೆಲ್ಲ ಸಂತಸ ತಂದಿದೆ. ಅವರ ದೇಶ ಸೇವೆಯ ಕೀರ್ತಿ ಉತ್ತರೋತ್ತರವಾಗಿ ಬೆಳೆಯಲಿ ಎಂದರು.

ಸಮಾರಂಭದಲ್ಲಿ ನಗರದ ಹಿರಿಯರಾದ ಸದಾಶಿವ ತಟಕೋಟೆ, ಕಾರ್ಮಿಕ ಸಂಘದ ಸದಸ್ಯರಾದ ಸದಾಶಿವ ಹನಗಂಡಿ, ಮಾಂತು ಗಡದಿ, ಮಾಳಪ್ಪ ಕರಿಗಾರ, ಪರಸಪ್ಪ ವಗ್ಗ, ಕರೆಪ್ಪ ಆಲಕನೂರ, ಹಣಮಂತ ಕುಡಚಿ, ನಾಗಪ್ಪ ಮಹಿಷವಾಡಗಿ, ರಾಜು ಬುರಡ, ನಾಗಪ್ಪ ಹುದ್ದಾರ, ಮಲ್ಲಪ್ಪ ವಗ್ಗ, ಕಾಡಪ್ಪ ತಮದಡ್ಡಿ, ರಾಜೇಸಾಬ ಸೌದಾಗರ, ನಿಂಗಪ್ಪ ಮಗದುಮ್, ದಶರಥ ಬುರುಡ, ಕರೆಪ್ಪ ಸಂತಿ, ರಾಮು ದಳವಾಯಿ, ಅಮೀರಸಾಬ ಸೌದಾಗರ, ಇಬ್ರಾಹಿಂ ಸೌದಾಗರ, ಮಾಳಪ್ಪ ಹಳಮನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಆರೋಗ್ಯಕರ ಜೀವನಕ್ಕೆ ಕ್ರೀಡೆ ಅತ್ಯವಶ್ಯಕ: ಪಿಡಿಓ ಚಕ್ರವರ್ತಿ



**ಸಿಂದಗಿ :** ಮಕ್ಕಳು ಪಠ್ಯ ಚಟುವಟಿಕೆಗಳ ಜೊತೆಗೆ ಕ್ರೀಡೆಗೂ ಮಹತ್ವ ನೀಡಬೇಕು, ಮಕ್ಕಳ ಬೆಳವಣಿಗೆ ಹಾಗೂ ಅವರ ಆರೋಗ್ಯಕರ ಜೀವನಕ್ಕೆ ಕ್ರೀಡೆ ಅತ್ಯಅವಶ್ಯಕ ಎಂದು ಅಭಿವೃದ್ಧಿ ಅಧಿಕಾರಿ ಆರ್ ಎಂ ಚಕ್ರವರ್ತಿ ಹೇಳಿದರು.

ತಾಲೂಕಿನ ಮೋರಟಗಿ ಗ್ರಾಮ ಪಂಚಾಯತಿ ಕೇಂದ್ರದಲ್ಲಿ ಹಮ್ಮಿಕೊಂಡ ಅಂತರ ರಾಷ್ಟ್ರೀಯ ಆಟದ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ, ಒಬ್ಬ ಸಾಮಾನ್ಯ ವ್ಯಕ್ತಿ ಆಗಲಿ ಶ್ರೀಮಂತ ವ್ಯಕ್ತಿ ಆಗಲಿ ಎಷ್ಟು ವರ್ಷ ಬದುಕಿದ್ದಾನೆ ಎನ್ನುವುದು ಮುಖ್ಯವಲ್ಲ ಎಷ್ಟು ಅರೋಗ್ಯವಂತನಾಗಿ ಬದುಕಿದ್ದಾನೆ ಎನ್ನುವುದು ಮುಖ್ಯ ಇಂದಿನ ವಿದ್ಯಾರ್ಥಿಗಳಾದ ತಾವುಗಳು ನಾಳೆ ನಮ್ಮ ದೇಶ ಬೆಳೆಸುವ ಪ್ರಜೆಗಳು ವಿದೇಶಿ ಕ್ರೀಡೆಗಿಂತ ಸ್ವದೇಶ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ನೀಡಿ ಉತ್ತಮ ಗುಣಮಟ್ಟದ ಶಿಕ್ಷಣ ಪಡೆದು ದೇಶ ಮೆಚ್ಚುವ ಮಕ್ಕಳಾಗಿ ಹೊರ ಹುಮ್ಮಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಂತರ ಗ್ರಾಪಂ ಅಧ್ಯಕ್ಷರ ಪ್ರತಿನಿದಿ ರವಿಕಾಂತ ನಡುವಿನಕೇರಿ ಮಾತನಾಡಿ ದಿನದಿಂದ ದಿನಕ್ಕೆ ಮೊಬೈಲ್ ಬಳಕೆ ಹೆಚ್ಚಾಗುತ್ತಿದೆ ವಿದ್ಯಾರ್ಥಿಗಳು ಹಾಗೂ ಯುವಕರು ಮೊಬೈಲ್ ಗಿಣಿಯ ಹಿಂದೆ ಬಿದ್ದು ಅದೆಷ್ಟೋ ಜನ ಬಲಿಯಾಗಿದ್ದು ದಿನ ಪತ್ರಿಕೆಗಳಲ್ಲಿ ನೋಡುತ್ತೇವೆ ಹೀಗಾಗಿ ಪಾಲಕರು ಮಕ್ಕಳಿಗೆ ಮೊಬೈಲ್ ಸಲುಗೆ ನೀಡಬಾರದು ಮಕ್ಕಳ ಮೇಲೆ ಮಮತೆಯಿಂದ ಮೊಬೈಲ್ ನೀಡಿದರೆ ರಾತ್ರಿ ಕಂಡ ಬಾವಿ ಹಗಲು ಬಿದ್ದಂತೆ ನಿಮ್ಮ ಮಕ್ಕಳ ಜೀವನ ನೀವೇ ಕೊಂಡಂತೆ ಆಗುತ್ತದೆ ಎಂದರು.

ಸಭೆಯಲ್ಲಿ ಭಾಗವಹಿಸಿದ ಎಲ್ಲರು ಮಕ್ಕಳೊಂದಿಗೆ ಚೆಸ್, ಆಟವನ್ನ ಆಡಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಇಸುಫ್ ಮುಲ್ಲಾ, ಗ್ರಾಪಂ ಕಾರ್ಯದರ್ಶಿ ಸುಭಾಸ್ ಮಿಲಿಟರಿ, ಮಲ್ಲು ದುದ್ದಗಿ, ನೂರಮಹಮದ್ ಕಣ್ಣಿ, ಐಇಸಿ ಸಂಯೋಜಕ ಬಸವರಾಜ ಹುಣಸಗಿ, ಗ್ರಂಥಾಲಯ ಮೇಲ್ವಿಚಾರಕ ಲಕ್ಷ್ಮಣ ಪತ್ತಾರ ಸೇರಿದಂತೆ ಸರ್ಕಾರಿ ಶಾಲೆಯ ಶಿಕ್ಷಕರ ವೃಂದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




**10 ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಯೋಗೋತ್ಸವ ಕಾರ್ಯಕ್ರಮವನ್ನು ಧಾರವಾಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಡಿಯಲ್ಲಿ ಆಯುಷ್ ಇಲಾಖೆ ವತಿಯಿಂದ ಜೂನ್ 10, 2024 ರಿಂದ ಜೂನ್ 20, 2024 ರವರೆಗೆ ಸಮಾಜ ಕಲ್ಯಾಣ ಇಲಾಖೆಯ ಅಧೀನ ಸರ್ಕಾರಿ ವಸತಿ ನಿಲಯಗಳಲ್ಲಿ ಉಚಿತ ಯೋಗ ತರಬೇತಿಯನ್ನು ಆಯೋಜಿಸಲಾಗಿದೆ.**

# ಶ್ರೀ ಸ್ವಾಮಿ ವಿವೇಕಾನಂದರ ಹಾಗೂ ಕಿತ್ತೂರರಾಣಿ ಚೆನ್ನಮ್ಮಳ ಪುತ್ತಳಿಗಳನ್ನು ಪ್ರತಿಸ್ಥಾಪನೆ

**ಸಿಂದಗಿ :** ಪಟ್ಟಣದಲ್ಲಿ ಬಹುದಿನಗಳಿಂದ ನೆನೆಗುದಿಗೆ ಬಿದ್ದಿರುವ ಶ್ರೀ ಸ್ವಾಮಿ ವಿವೇಕಾನಂದರ ಹಾಗೂ ಕಿತ್ತೂರರಾಣಿ ಚೆನ್ನಮ್ಮಳ ಪುತ್ತಳಿಗಳನ್ನು ಪ್ರತಿಸ್ಥಾಪನೆ ಮಾಡಲಾಗಿದ್ದು. ಇನ್ನೂ ಕೆಲ ಕಾಮಗಾರಿಗಳ ಬಾಕಿ ಇದ್ದು ಟೀಪುಸುಲ್ತಾನ ವೃತ್ತ, ಸ್ವಾಮಿ ವಿವೇಕಾನಂದ ವೃತ್ತ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತ ಈ ಮೂರು ವೃತ್ತಗಳನ್ನು ಒಂದೇ ವೇದಿಕೆಯಲ್ಲಿ ರಾಜ್ಯದ ಮಂತ್ರಿಗಳನ್ನು ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಅನಾವರಣಗೊಳಿಸಲಾಗುವುದು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದಲ್ಲಿ ವಿಜಯಪುರ ನಗರಕ್ಕೆ ಹೋಗುವ ಮಾರ್ಗದಲ್ಲಿ ವೀರರಾಣಿ ಕಿತ್ತೂರ ಚನ್ನಮ್ಮ ವೃತ್ತದಲ್ಲಿ ಪುತ್ತಳಿ ಪ್ರತಿಸ್ಥಾಪಿಸಿ ಮಾತನಾಡಿದರು.

ಮೆರವಣಿಗೆಗೆ ಚಾಲನೆ ನೀಡಿದ ಕೂಡಲ ಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯ ಮೃಂಜಯ ಮಹಾಸ್ವಾಮಿಜಿ ಮಾತನಾಡಿ, ಬಹುದಿನಗಳಿಂದ ನೆನೆಗುದಿಗೆ ಬಿದ್ದಿರುವ ಶ್ರೀ ಸ್ವಾಮಿವಿವೇಕಾನಂದರ ಹಾಗೂ ಕಿತ್ತೂರರಾಣಿ ಚೆನ್ನಮ್ಮಳ ಪುತ್ತಳಿಗಳನ್ನು ಶಾಸಕ ಅಶೋಕ ಮನಗೂಳಿಯವರ ಪರಿಶ್ರಮದಿಂದ ತಮ್ಮ ಸ್ವಂತ ಹಣದಲ್ಲಿ ಕಿತ್ತೂರ ರಾಣಿ ಚನ್ನಮ್ಮಳ ಕಂಚಿನ ಪುತ್ಥಳಿ 10 ಅಡಿ ಮತ್ತು ಶ್ರೀ ಸ್ವಾಮಿವಿವೇಕಾನಂದರ



ಕಂಚಿನ ಪುತ್ಥಳಿ 8 ಅಡಿ ಎತ್ತರದ ಪುತ್ತಳಿಗಳನ್ನು ಪ್ರತಿಸ್ಥಾಪನೆ ಮಾಡಲಾಗಿದೆ ಮುಂದಿನ ದಿನಗಳಲ್ಲಿ ಮೂರು ವೃತ್ತಗಳನ್ನು ಅನಾವರಣಗೊಳಿಸುವ ಭರವಸೆ ಶಾಸಕರು ನೀಡಿದ್ದಾರೆ ಆ ಕಾರ್ಯಕ್ರಮದಲ್ಲಿ ಎಲ್ಲ ಮಠಾದೀಶರ ಆಗಮನ ಆಗಲಿದೆ ಎಂದರು.

**ಭವ್ಯ ಮೇರವಣಿಗೆ;** ಶ್ರೀ ಸ್ವಾಮಿ ವಿವೇಕಾನಂದರ ಹಾಗೂ ಕಿತ್ತೂರರಾಣಿ ಚೆನ್ನಮ್ಮಳ ಪುತ್ತಳಿಗಳ ಮೇರವಣಿಗೆಯು ಪಟ್ಟಣದ ಕನಕದಾಸ ವೃತ್ತದಿಂದ ಪ್ರಾರಂಭಗೊಂಡು ಶ್ರೀ ಸ್ವಾಮಿ ವಿವೇಕಾನಂದ ವೃತ್ತದಲ್ಲಿ ಪುತ್ತಳಿ ಸ್ಥಾಪನೆಗೊಂಡು ನಂತರ ಬಸವೇಶ್ವರ ವೃತ್ತದ ಮಾರ್ಗವಾಗಿ ತೆರಳಿ ಕಿತ್ತೂರರಾಣಿ ಚೆನ್ನಮ್ಮಳ ವೃತ್ತದಲ್ಲಿ ಪುತ್ತಳಿ ಪ್ರತಿಸ್ಥಾಪನೆಗೊಂಡಿತು.

ವಾದ್ಯ ಮೇಳ; ಗೊಂಬೆ ಕುಣಿತ, ಜೋಗಮ್ಮ ಕುಣಿತ, ಚಿಟ್ಟ ಹಲಗಿ ವಾದ್ಯ ಮೇಳ, ಕುದುರೆ ಕುಣೀತ, ಡೋಳ್ಳು ಕುಣೀತ ಬೆಂಡು ಬಾಜಿಯೊಂದಿಗೆ ಅದ್ದೂರಿ ಮೇರವಣಿಗೆಯು ಜನಮನ ಸೂರು ಗೊಂಡಿತು.

ಈ ಸಂದರ್ಭದಲ್ಲಿ ಸಾರಂಗಮಠದ ಡಾ. ಪ್ರಭು ಸಾರಂಗದೇವ ಶಿವಾಚಾರ್ಯರು, ಆದಿಶೇಷ ಮಠದ ರಾಜಯೋಗಿ ವೀರರಾಜೇಂದ್ರ ಸ್ವಾಮಿಗಳು, ಊರಿನ ಹಿರೇಮಠದ ಶಿವಾನಂದ ಶಿವಾಚಾರ್ಯರು, ಆಸಂಗಿಹಾಳ ಆರೂಢಮಠದ ಪಂಚಮಸಾಲಿ ಸಮಾಜದ ಅದ್ಯಕ್ಷ ಎಂ.ಎಂ.ಹಂಗರಗಿ, ಸೋಮನಗೌಡ ಬಿರಾದಾರ, ಲಿಂಬೆ ಅಭಿವೃದ್ಧಿ ಮಂಡಳಿ ಮಾಜಿ ಅದ್ಯಕ್ಷ ಅಶೋಕ ಅಲ್ಲಾಪೂರ, ಪುರಸಭೆ ಮಾಜಿ ಅದ್ಯಕ್ಷ ಡಾ.ಶಾಂತವೀರ ಮನಗೂಳಿ, ಜಿಪಂ ಮಾಜಿ ಉಪಾಧ್ಯಕ್ಷ ಸಿದ್ದರಾಮ ಪಾಟೀಲ ಹೂನಳ್ಳಿ, ಮುಖಂಡರಾದ ಸಂಗನಬಸು ಬಿರಾದಾರ, ಸಂಗನಗೌಡ ಪಾಟೀಲ, ಮಲ್ಲನಗೌಡ ಪಾಟೀಲ ಬ್ಯಾಕೋಡ, ವ್ಹಿ.ಬಿ.ಕುರುಡೆ, ರಮೇಶ ಬಂಟನೂರ, ಗುರುಗೌಡ ಬಿರಾದಾರ, ಅಶೋಕ ತೆಲ್ಲೂರ, ರವಿ ಬಿರಾದಾರ, ಸುರೇಶ ಹಳ್ಳೂರ, ಅಶೋಕ ಕೊಳಾರಿ, ಮಲ್ಲನಗೌಡ ಪಾಟೀಲ ಇಬ್ರಾಹೀಂಪೂರ, ಚಂದ್ರಶೇಖರ ನಾಗರಬೇಟ್ಟ, ಗುರು ಬಸರಕೋಡ, ಸ್ವಾಮಿ ವಿವೇಕಾನಂದ ವೃತ್ತದ ಸಮಿತಿಯ ಶಿವಾನಂದ ನಿಗಡಿ, ಬಸವರಾಜ ಪಾಟೀಲ, ಸಂತೋಷ ಭಜಂತ್ರಿ, ಗಂಗಾಧರ ರುಕುಂಪುರ ಸೇರಿದಂತೆ ಅನೇಕ ಗ್ರಾಮಗಳಿಂದ ಸಾವಿರಾರು ಸಾರ್ವಜನಿಕರು ಪಾಲ್ಗೊಂಡಿದ್ದರು.

# ಪ್ರವಾಹ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳಿ: ಇಒ ವೀರಣ್ಣ ವಾಲಿ

**ಬೆಳಗಾವಿ :** ಜುಗೂಳ, ಮಂಗಾವತಿ, ಕುಸನಾಳ, ಮೊಳವಾಡ ಸೇರಿದಂತೆ ಕೃಷ್ಣಾ ನದಿಯಿಂದ ಪ್ರವಾಹ ಉಂಟಾಗುವ ಗ್ರಾಮಗಳಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಇಒ ವೀರಣ್ಣ ವಾಲಿ ಪಿಡಿಒಗಳಿಗೆ ಸೂಚಿಸಿದರು.

ಕಾಗವಾಡ ಪಟ್ಟಣದ ಪ್ರವಾಸಿ ಮಂದರಿದಲ್ಲಿ ಗುರುವಾರ ನಡೆದ ತಾಲೂಕಿನ ಎಲ್ಲ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಜಿಲ್ಲಾದ್ಯಂತ ಉತ್ತಮ ಮಳೆಯಾಗುತ್ತಿದೆ. ಅತೀವೃಷ್ಟಿ ಬರುವ ಸಾಧ್ಯತೆಯಿದೆ. ಕೇಂದ್ರ ಸ್ಥಾನದಲ್ಲಿ ಇದ್ದು ಈಗಿನಿಂದಲೇ ಕಾರ್ಯಪ್ರವೃತರಾಗಿ ಕಾಳಜಿ ಕೇಂದ್ರಗಳಲ್ಲಿ ಅಗತ್ಯ ಸೌಕರ್ಯ ಪಟ್ಟಿಮಾಡಿ ಪೂರೈಸಲು ಕ್ರಮ ಕೈಗೊಳ್ಳಬೇಕು.

15 ದಿನಗಳಿಗೊಮ್ಮೆ ಜಲಕುಂಬ, ನೀರಿನ ಟ್ಯಾಂಕ್ ಶುಚಿಗೊಳಿಸಬೇಕು



ಜೊತೆಗೆ ಕುಡಿಯುವ ನೀರು ತಪಾಸಣೆಗೊಳಪಡಿಸುವಂತೆ ತಿಳಿಸಿದರು.

ಮನರೇಗಾ, ವಸತಿ, ಡಿಜಿಟಲ್ ಗ್ರಂಥಾಲಯ, ಕರ ವಸೂಲಿ ಸಂಗ್ರಹ, ಎಸ್ ಬಿಎಮ್ ಯೋಜನೆಗಳ ನಿಗದಿತ ಕಾಲಮಿತಿಯಲ್ಲಿ ಪ್ರಗತಿ ಸಾಧಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಪಂಚಾಯತ ರಾಜ್ ಸಹಾಯಕ ನಿರ್ದೇಶಕ ಎ.ಡಿ. ಎನ್ನಾರಿ, ಪಿಡಿಒಗಳಾದ, ಯಶವಂತ ವಂಟಗೂಡೆ, ಸಂಜೀವ ಸೂರ್ಯವಂಶಿ, ಶಿಲ್ಪಾ ನಾಯ್ಕವಾಡಿ, ಶೈಲಶ್ರೀ ಭಜಂತ್ರಿ, ಪ್ರಶಾಂತ ಇನಾಮದಾರ, ರಾಕೇಶ ಕಾಂಬಳೆ, ಅನೀಲ ಸೆಜೋಳೆ ಸಿಬ್ಬಂದಿಗಳಾದ ಗುರು ಸೋಮನ್ನವರ, ಅಮೀತ ಇಂಗಳಗಾಂವಿ, ಆದಿನಾಥ, ಯುವರಾಜ, ಮುರುಗೇಶ, ಮಹಾಂತೇಶ ಪಡದಲ್ಲಿ ಮುಂತಾದವರು ಇದ್ದರು.

# ಕುಷ್ಠರೋಗಿಗಳ ಬಡಾವಣೆಯಲ್ಲಿ ಟಿ.ಎ. ನಾರಾಯಣಗೌಡರ 58ನೇ ಹುಟ್ಟು ಹಬ್ಬಆಚರಣೆ

**ವಿಜಯಪುರ :** ಕರ್ನಾಟಕರಕ್ಷಣಾ ವೇದಿಕೆಯರಾಜ್ಯಾಧ್ಯಕ್ಷರಾದ ಟಿ ಎ ನಾರಾಯ–ಣಗೌಡರ 58ನೇ ಹುಟ್ಟು ಹಬ್ಬದ ಅಂಗವಾಗಿ ವಿಜಯಪುರಜಿಲ್ಲಾಘಟಕದ ನೇತೃತ್ವದಲ್ಲಿ ನಗರದ ಶಿವಗಿರಿ ಹತ್ತಿರಇರುವ ಮಹಾತ್ಮಗಾಂಧಿಕುಷ್ಠ ರೋಗಿಗಳ ಬಡಾವಣೆಯಲ್ಲಿಅದ್ದೂರಿಯಾಗಿ ಆಚರಿಸಲಾಯಿತು.ಬೆಳಿಗ್ಗೆ 9ಕ್ಕೆ ಮಲ್ಲಿಕಾರ್ಜುನದೇವಾಲಯದಲ್ಲಿ ವಿಶೇಶ ಪೂಜೆ ಸಲ್ಲಿಸಿಬಡಾವಣೆಯನಿವಾಸಿಗಳಉಪಸ್ಥಿತಿಯಲ್ಲಿಕೇಕ ಕತ್ತರಿಸಿಸಿಹಿಹಂಚಿಹಣ್ಣುಹಂಪಲುವಿತರಿಸಲಾಯಿತು. ಇದೇ ಸಂದರ್ಭದಲ್ಲಿನಿವಾಸಿಗಳ ಆರೋಗ್ಯತಪಾಸಣೆ ಹಾಗೂ ಔಷಧೋಪಚಾರಡಾ॥ಎಂ ಡಿ ಮೇತ್ರಿಯವರ ನೇತೃತ್ವದಲ್ಲಿಜರುಗಿತು.

ಇದೇ ವೇಳೆ ಜಿಲ್ಲಾಧ್ಯಕ್ಷರಾದ ಶ್ರೀಶೈಲ ಮುಳಜಿಯವರು ಮಾತನಾಡಿ, ನಮ್ಮರಾಜ್ಯಾಧ್ಯಕ್ಷರುಕನ್ನಡ ನಾಡು ನುಡಿ,ಭಾಷೆ, ನೆಲೆ–ಜಲಕ್ಕಾಗಿತಮ್ಮ ಪ್ರಾಣವನ್ನೇತ್ಯಾಗಕ್ಕೆಇಟ್ಟಿರುವ ಮಹಾನ್ ನಾಯಕರು ಇವರನ್ನು ಯಾವುದೇ ದುಷ್ಟ ಶಕ್ತಿಗಳು ಏನು ಮಾಡಿಕೊಳ್ಳಲು ಆಗದುತಮ್ಮ ನ್ಯಾಯಯುತ ಹೋರಾಟದ ಮೂಲಕ ನಾಡಿನ ಗಮನ ಸೆಳೆದಿರುವ ಶ್ರೀಯುತರ ಮಾರ್ಗದಲ್ಲಿಇಂದು ಲಕ್ಷಾಂತರಕಾರ್ಯಕರ್ತರು ಸಂಘಟಿತರಾಗಿದ್ದಾರೆಇವರ ಮಾರ್ಗದಲ್ಲಿಕರ ವೇಜಿಲ್ಲಾಘಟಕಕೂಡಾ ಮುಂದೆ ಸಾಗುತ್ತಿದೆ ಈಗಾಗಲೇ ಭ್ರಷ್ಟರನ್ನು ಸದೆಬಡಿಯಲುಯೋಜನೆರೂಪಿಸಲಾಗಿದೆರಾಜ್ಯದಲ್ಲಿ ಭ್ರಷ್ಟಾಚಾರತುಂಬಿ ತುಳುಕುತ್ತಿದೆ ಇದಕ್ಕೆಕಡಿವಾಣ ಹಾಕಲು ಕರವೇ ಮುಂದಾಗಿದೆಜಿಲ್ಲೆಯಲ್ಲಿಅಭಿವೃದ್ಧಿ ಕಾಮಗಾರಿಗಳು ಕುಂಠಿತಗೊಂಡಿವೆ ಸರ್ಕಾರಗ್ಯಾರಂಟಿಯೋಜನೆಕೊಡುವ ನೆಪದಲ್ಲಿ ಬೆಲೆ ಏರಿಕೆ ಬಗ್ಗೆ ತಲೆ ಕೆಡಿಸಿಕೊಳ್ಳದೆ ಇರುವದು ವಿಷಾದನೀಯಎಂದು ನುಡಿದರು.

ಇದೇ ವೇಳೆ ಮಹಾನಗರ ಪಾಲಿಕೆ ಸದಸ್ಯರ ಪರವಾಗಿ ಸಮಾಜ ಸೇವಕರಾದ ಶ್ರೀ ರಾಜುಎಲ್‌ಜಾಧವರವರು ಮುಖ್ಯಅತಿಥಿಯಾಗಿಭಾಗವಹಿಸಿಈಬಡಾವಣೆಯಲ್ಲಿ ಈಗಾಗಲೇ ದೇವಾಲಯದಕಾಂಪೌಂಡ್‌ಗೋಡೆ ನಿರ್ಮಿಸಿಕೊಟ್ಟು ಹೈ ಮಾಸ್ಕ ಲೈಟ್ ನ ವ್ಯವಸ್ಥೆ ಮಾಡಲಾಗಿದೆಮುಂದಿನದಿನಗಳಲ್ಲಿಹಂತಹಂತವಾಗಿ ಎಲ್ಲ ಅಭಿವೃದ್ಧಿಕಾರ್ಯ ಕೈಗೆತ್ತಿಕೊಳ್ಳಲಾಗುವದು. ಇಂದು ನಮ್ಮ ನಾಡಿನಕೆಚ್ಚೆದೆಯ ಹೋರಾಟಗಾರರಾದಕರವೇಯರಾಜ್ಯಾಧ್ಯಕ್ಷರಾದ ಶ್ರೀ ಟಿ ಎ ನಾರಾಯಣಗೌಡರ ಹುಟ್ಟು ಹಬ್ಬದಆಚರಣೆಯಲ್ಲಿ ಭಾಗವಹಿಸಿದ್ದು ಸಂತೋಷಎನ್ನಿಸುತ್ತಿದೆಎಂದು ನುಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ ಬಿಜಾಪುರ, ಸಾಹೇಬಣ್ಣಮಡಿವಾಳರ,ಸಂಜು ಕರ್ಪೂರಮಠ,ರವಿ ಕಿತ್ತೂರು,ಡಾ॥ಎಂ ಡಿ ಮೇತ್ರಿ, ಮಹದೇವರಾವಜಿ, ಫಯಾಜ್‌ಕಲಾದಗಿ,ಅನುರಾಧ ಕಲಾಲ, ದಸ್ತಗೀರ ಸಾಲೋಟಗಿ,ಸಿದ್ದುಗೌಡತೊರವಿ,ರಜಾಕಕಾಖಂಡಕಿ, ರುಕ್ಮಿಣಿಚವ್ಹಾಣ,ಬಡಾವಣೆಯ ಪ್ರಮುಖರಾದ ಶಿವು ಸರ್,ಮಲ್ಲೇಶ ಹಾಗೂ ಯುವಕರು ಸೇರಿದಂತೆ ನೂರಾರುಜನರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿ ಮಾಡಿದರು.

ಕಾರ್ಯಕ್ರಮ ನಿರೂಪಣೆ ಹಾಗೂ ಪ್ರಾಸ್ತಾವಿಕವಾಗಿಜಿಲ್ಲಾಪ್ರಧಾನಕಾರ್ಯದರ್ಶಿಸುರೇಶ ಬಿಜಾಪುರ ಮಾತನಾಡಿದರು.

# ಸಿಡಾಕ್: ಉದ್ಯಮಶೀಲತಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಮತ್ತು ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ಕೊಪ್ಪಳ ಇವರಿಂದ ಸ್ವಯಂ ಉದ್ಯೋಗ ಪ್ರಾರಂಭಿಸುವ ನಿರುದ್ಯೋಗಿ ಯುವಕ ಯುವತಿಯರಿಗೆ ಮತ್ತು ಉದ್ಯಮ ಆಕಾಂಕ್ಷಿಗಳಿಗೆ ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ತರಬೇತಿಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಸರ್ಕಾರದ ಸ್ವಂತ ಉದ್ಯೋಗದ ಯೋಜನೆಗಳು, ಬ್ಯಾಂಕಿನ ವ್ಯವಹಾರ, ಮಾರುಕಟ್ಟೆ ಸಮೀಕ್ಷೆ, ಯೋಜನಾ ವರದಿ ತಯಾರಿಕೆ, ಹಾಗೂ ಉದ್ಯಮ ನಿರ್ವಹಣೆ, ಉದ್ಯಮಶೀಲತೆ, ಉದ್ಯಮ ಪ್ರಾರಂಭದ ಹಂತಗಳು, ಉದ್ಯಮಗಳನ್ನು ಪ್ರಾರಂಭಿಸಲು ಸರ್ಕಾರದ ಯೋಜನೆಗಳು, ಸಾಲ ಸೌಲಭ್ಯಗಳು, ಬ್ಯಾಂಕ್ ಬಗ್ಗೆ, ಜಾಹೀರಾತು ಮತ್ತು ಮಾರುಕಟ್ಟೆಯ ಕುರಿತು ನೋಂದಣಿ ಮಾಡುವ ವಿಧಾನಗಳು, ಯಶಸ್ವಿ ಉದ್ಯಮಿಗಳ ಜೊತೆ ಸಂವಾದ, ಉದ್ಯಮ ನಿರ್ವಹಣೆ ಮಾಡುವ ವಿಧಾನಗಳು ಮತ್ತು ಇತ್ಯಾದಿ ವಿಷಯಗಳ ಕುರಿತು ತರಬೇತಿಯನ್ನು ನೀಡಲಾಗುವುದು.

ಜಿಲ್ಲೆಯ 18 ರಿಂದ 45 ವಯೋಮಾನದ ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿದ ಆಸಕ್ತ ಅಭ್ಯರ್ಥಿಗಳು ಜೂನ್ 18 ರೊಳಗೆ ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ, ರೇಶನ್ ಕಾರ್ಡ್‌ಗಳ ಕ್ಸೆರಾಕ್ಸ ಪ್ರತಿಗಳು, 2 ಪಾಸ್‌ಪೋರ್ಟ್ ಅಳತೆಯ ಫೋಟೋಗಳೊಂದಿಗೆ ಜಂಟಿ ನಿರ್ದೇಶಕರು, ಸಿಡಾಕ್, ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿ ಕೊಪ್ಪಳ ಆವರಣ, ನಗರಸಭೆ ಎದುರುಗಡೆ, ಕೊಪ್ಪಳ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 6362557332/6362681190 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಸಿಡಾಕ್‌ನ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಣ್ಣ್ಮಣ ಸೆಳೆದ ದಕ್ಷಿಣ ಭಾರತದ ಖೇಲೋ ಜ್ಯೂನಿಯರ್ ಮತ್ತು ಸಿನಿಯರ್ ಮಹಿಳಾ ಕ್ರೀಡಾಕೂಟ

**ಬಾಗಲಕೋಟೆ :** ಬಾಗಲಕೋಟೆಯಲ್ಲಿ ಬಿ.ವಿ.ವಿ.ಸಂಘ ಹಾಗೂ ರಾಜ್ಯ ವುಶು ಸಂಸ್ಥೆ ಹಾಗೂ ರಾಷ್ಟ್ರೀಯ ವುಶು ಸಂಸ್ಥೆದಿಂದ ಹಮ್ಮಿಕೊಂಡ ದಕ್ಷಿಣ ಭಾರತದ ಖೇಲೋ ಜ್ಯೂನಿಯರ್ ಮತ್ತು ಸಿನಿಯರ್ ಮಹಿಳಾ ಕ್ರೀಡಾಕೂಟ ಬುಧವಾರ ಮುಂದುವರೆದಿದ್ದು ಬಾಗಲಕೋಟೆ ಜನರ ಕಣ್ಣ್ಮಣ ಸೆಳೆಯುತ್ತಿದೆ.

ದಕ್ಷಿಣ ಭಾರತದ ಖೇಲೋ ಇಂಡಿಯಾ ಸಿನಿಯರ್ ಹಾಗೂ ಜ್ಯೂನಿಯರ್ ವಿಭಾಗದಲ್ಲಿ ತಮಿಳನಾಡು ಕ್ರೀಡಾಪಟುಗಳು 7 ಚಿನ್ನ, ಓಡಿಸ್ಸಾ 3 ಚಿನ್ನ, ಕೆರಳ 3ಚಿನ್ನ, ತೆಲಂಗಾಣ 1 ಚಿನ್ ಪಡೆದರೆ, ಕರ್ನಾಟಕ 6 ಬೆಳ್ಳಿ 13 ಕಂಚು ಪಡೆದು ಮುನ್ನಡೆ ಸಾಧಿಸಿದ್ದು ಇಂದಿನ ಪಂದ್ಯಾವಳಿಗಳಲ್ಲಿ ಕರ್ನಾಟಕಏರಡನೇ ಸ್ಥಾನದಲ್ಲಿದ್ದುಓಡಿಸ್ಸಾ 3ನೇ ಸ್ಥಾನದಲ್ಲಿ ಮುನ್ನಡೆದಿದೆ,

ಸಿನಿಯರ್ ವಿಭಾಗದಲ್ಲಿ

ಚಾಂಗ್‌ಕೌನ್ ವಿಭಾಗ : ಕೌಶಿಕಾ ರೌಟ್ರೇ (ಓಡಿಸ್ಸಾಚಿನ್ನ), ಸಂಜನಾ ಹಂಚಿನಮನಿ (ಕರ್ನಾಟಕ ಬೆಳ್ಳಿ), ರೇಣುಶ್ರೀ ನಂದಿನಿ (ಕರ್ನಾಟಕ)ಹಾಗೂ ಪ್ರತಿಕ್ಷಾಹಿರೇಮಠ(ಕರ್ನಾಟಕ ಕಂಚು).

ನಾಂಕೌನ್ ವಿಭಾಗದಲ್ಲಿ: ಗೋಪಿಕಾ ವಿ.ಪಿ,(ಕೆರಳ ಚಿನ್ನ), ಕೊಟ್ಟಳ ಪೂಜಿತಾಶ್ರುತಿ (ಆಂದ್ರಪ್ರದೇಶ ಬೆಳ್ಳಿ), ಒಡಲಕೊಂಡ ಭಾರತಿ (ತೆಲಂಗಾಣ) ಹಾಗೂ ಗೌರಿ ಹಿರೇಮಠ (ಕರ್ನಾಟಕ



ಕಂಚು).

ತೈಜಿಕೌನ್ ವಿಭಾಗ : ನಿರಂಜನಾ ಪಿ (ಕೆರಳ ಚಿನ್ನ), ಪಂಚಮಿ ಸಿಂಗ್ ( ಓಡಿಸ್ಸಾ ಬೆಳ್ಳಿ), ರಾಣಿ ಲಾಯದಗುಂದಿ (ಕರ್ನಾಟಕ) ಹಾಗೂ ಒರಿಗೆಲಾಅನಿತಾ( ತೆಲಂಗಾಣ ಕಂಚು).

ಬಾಗುವಾರ್ಝೂಂಗ್ ವಿಭಾಗ: ಜ್ಯೋತ್ಸ್ನಾರಾಣಿಜೆನಾ (ಓಡಿಸ್ಸಾಚಿನ್ನ), ಎಸ್.ಸುವಶ್ರೀ (ತಮಿಳನಾಡು ಬೆಳ್ಳಿ), ಪವಿತ್ರಾ ಭೂತಾಳಿ (ಕರ್ನಾಟಕ) ಹಾಗೂ ಜಿತಿಕಾಪ್ರೇಮಪಿ,ಕೆ(ಕೆರಳ ಕಂಚು).

ಜಿಯಾನ್ಸು ವಿಭಾಗ:ಜ್ಯೋತ್ಸ್ನಾರಾಣಿ ಮುದುಳಿ ( ಓಡಿಸ್ಸಾಚಿನ್ನ), ಸೌಜನ್ಯ ಲಾಯದಗುಂದಿ (ಕರ್ನಾಟಕ ಬೆಳ್ಳಿ), ರುಕ್ಮಣಿ ಮುರಕಾಚೆಟ್ಟಿ (ಕರ್ನಾಟಕ) ಹಾಗೂ ಲೊಲಮ ರಾಜಶ್ರೀ(ತೆಲಂಗಾಣ ಕಂಚು).

ನಂದಾವೋ ವಿಭಾಗ: ಪೋಡುಕಂಟಿ ಪವಿತ್ರಾಚೆರ್ರಿ (ತೆಲಂಗಾಣಚಿನ್ನ), ತೇಜಶ್ವೀನಿ ಹೊಟ್ಟಿ (ಕರ್ನಾಟಕ ಬೆಳ್ಳಿ), ಅಂಕೀತಾಕುಲಕರ್ಣಿ (ಕರ್ನಾಟಕ)ಹಾಗೂ ಅನುಷಾ ಬಾರಿಕ್ (ಓಡಿಸ್ಸಾ ಕಂಚು).

ತೈಜಿಜಿಯನ್ ವಿಭಾಗ:ಒಡೆಪಲ್ಲೇ ನವೀನಾ (ತೆಲಂಗಾಣಚಿನ್ನ),ಅಕ್ಷತಾ ಪಾಟೀಲ (ಕರ್ನಾಟಕ ಬೆಳ್ಳಿ), ತನ್ಯ ಶ್ರೀವಾಸ್ತವ (ಓಡಿಸ್ಸಾ) ಹಾಗೂ ಅನುಪಮ ಮೇಲಿನಮನಿ (ಕರ್ನಾಟಕ ಕಂಚು).

ಕಿಯಾಂಗ್ಸು ವಿಭಾಗ:ಪಿ.ಎ.ಶ್ರೀಯಾ (ತಮಿಳನಾಡು ಚಿನ್ನ), ಸಹನಾ ಕೊಣ್ಣುರ (ಕರ್ನಾಟಕ ಬೆಳ್ಳಿ),ಮಲ್ಲರಮ್‌ಕವಿತಾ (ತೆಲಂಗಾಣ) ಹಾಗೂ ರೀತಾ ಸೆಥಿ (ಓಡಿಸ್ಸಾ ಕಂಚು).

ಜ್ಯೂನಿಯರ್ ವಿಭಾಗದಲ್ಲಿ

ಚಾಂಗ್‌ಕೌನ್ ವಿಭಾಗ:ಡಿ,ಬಾಲಹರ್ಷಿಣಿ (ತಮಿಳನಾಡು ಚಿನ್ನ), ಗೌರಿ ನಂದನಎನ್.ಪಿ(ಕೆರಳ ಬೆಳ್ಳಿ),ಶ್ರೀನಂದಾ ಎಸ್,(ಕೆರಳ) ಹಾಗೂ ದಿಬ್ಯಕಾಂತಿಓರಂ (ತಮಿಳನಾಡು ಕಂಚು).

ಜಿಯಾನ್ಸು ವಿಭಾಗ: ಲಕ್ಷ್ಮೀಪ್ರಭಾಎಸ್(ತಮಿಳನಾಡು ಚಿನ್ನ), ಪಾರಿಯಾ ಖಾನಂ ( ತೆಲಂಗಾಣ ಬೆಳ್ಳಿ), ಎಸ್.ಇಸ್ಸಿತಾ (ತಮಿಳನಾಡು) ಹಾಗೂ ಮಮಲಿ ಜೆನಾ (ಓಡಿಸ್ಸಾ ಕಂಚು).

ಕಿಯಾಂಗ್ಸು ವಿಭಾಗ: ಮಿಸ್ಸಬಾ ಪಾಥಿಮಾಎ,ಆರ್ (ತಮಿಳನಾಡು ಚಿನ್ನ), ಖುಷಿ ವರ್ಮಾ (ಕರ್ನಾಟಕ ಬೆಳ್ಳಿ), ಜಿ,ಪೂಜಿತಾ (ತೆಲಂಗಾಣ) ಹಾಗೂ ಈಶ್ವರಿ ಬಿಳಗಿ (ಕರ್ನಾಟಕ ಕಂಚು).

ನಾಂಕೌನ್ ವಿಭಾಗ: ಶ್ರೀಲಿನಾ ಎಮ್ (ತಮಿಳನಾಡು ಚಿನ್ನ), ನುಪುರ ಪಟ್ನಾಯಿಕ್ (ಓಡಿಸ್ಸಾ ಬೆಳ್ಳಿ), ಅಪರ್ಣಾ ಎ (ಕೆರಳ) ಹಾಗೂ ಥರಿನಿತಾ ಡಿ (ತಮಿಳನಾಡು ಕಂಚು).

ನಂದಾವೋ ವಿಭಾಗ: ವೇಧಾಶ್ರುತಿಎಸ್ (ತಮಿಳನಾಡು ಚಿನ್ನ), ಐಶಾ ಎನ್ (ಕೆರಳ ಬೆಳ್ಳಿ), ನಿಕ್ಷೀತಾವಿ,ಎಸ್(ತಮಿಳನಾಡು) ಹಾಗೂ ಸುಹಾಸಿನಿ ರಜಪುತ( ಕರ್ನಾಟಕ ಕಂಚು).

ತೈಜಿಕೌನ್ ವಿಭಾಗ: ನೇಹಾ ನೌಪಾಯಿ (ಕೆರಳ ಚಿನ್ನ), ಹಶಿನಾ ಬಿ (ತಮಿಳನಾಡು ಬೆಳ್ಳಿ), ನಂದಿತಾಗೌಡರ (ಕರ್ನಾಟಕ) ಹಾಗೂ ಅಗ್ನಾಎಮ್.ಪಿ (ಕೆರಳ ಕಂಚು).


ತೈಜಿಜಿಯನ್ ವಿಭಾಗ:ಆಧಿರಾಯಿಎಸ್,ಬಿ (ತಮಿಳನಾಡು ಚಿನ್ನ), ಲುಹಾ ಸುನೀರ್ ಹಮ್ಸಾ (ಕೆರಳ ಬೆಳ್ಳಿ), ಜ್ಯೋತಿ ಲಾಗಲೋಟಿ (ಕರ್ನಾಟಕ) ಹಾಗೂ ರಬೀಯಾಜಖಿಯಾಎ.ಜೆ(ತಮಿಳನಾಡು ಕಂಚು)

ತೈಜಿಶಾನ್ ವಿಭಾಗ:ಎಮ್.ಭವತರಾಣಿ (ತಮಿಳನಾಡು ಚಿನ್ನ), ಪಾಯಲ್ ಪಟ್ನಾಯಕ ( ಓಡಿಸ್ಸಾ ಬೆಳ್ಳಿ),ಮಹೇಕ್‌ಜಬೀನ ನದಾಪ (ಕರ್ನಾಟಕ) ಹಾಗೂ ಸವಿತಾ ಹುಬ್ಬಳ್ಳಿ (ಕರ್ನಾಟಕ ಕಂಚು). ಪದಗಳನ್ನು ಪಡೆದಿದ್ದಾರೆ.

# ಜಿಲ್ಲಾ ಸತ್ರ ನ್ಯಾಯಾಲಯ: ಮೂರು ಹೊಸ ಕ್ರಿಮಿನಲ್ ಕಾನೂನುಗಳ ಕುರಿತು ಜರುಗಿದ ಕಾರ್ಯಾಗಾರ

**ಧಾರವಾಡ :** ಜೂನ್ 09, 2024 ರಂದು ಬೆಳಿಗ್ಗೆ 09.30 ಗಂಟೆಗೆ ಧಾರವಾಡ ಜಿಲ್ಲಾ ಪೊಲೀಸ್, ಜಿಲ್ಲಾ ಸತ್ರ ನ್ಯಾಯಾಲಯ ಧಾರವಾಡ ಹಾಗೂ ಕಂದಾಯ ಇಲಾಖೆ ಧಾರವಾಡ, ಹುರುಕಡ್ಲಿ ಅಜ್ಜ ಕಾನೂನು ಮಹಾ ವಿದ್ಯಾಲಯ ಧಾರವಾಡ ಇವರ ಸಹಯೋಗದಲ್ಲಿ ಧಾರವಾಡದ ಕರ್ನಾಟಕ ಕಾಲೇಜ್ ಆವರಣದಲ್ಲಿರುವ ಸೃಜನ ರಂಗಮಂದಿರದಲ್ಲಿ 03 ಹೊಸ ಕ್ರಿಮಿನಲ್ ಕಾನೂನುಗಳ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಬೆಂಗಳೂರು ಕರ್ನಾಟಕ ಉಚ್ಚ ನ್ಯಾಯಾಲಯದ ವಕೀಲರಾದ ಮಲ್ಲಿಕಾರ್ಜುನ ಆರ್.ಎಂ, ಬೆಂಗಳೂರು ಕೆಎಲ್‌ಇ ಲಾ ಕಾಲೇಜ್ ಪ್ರೋಪೆಸರ್ ಡಾ. ಎಸ್.ಜಿ.ಗೌಡಪ್ಪಗೌಡರ್, ಹಾಗೂ ಬೆಂಗಳೂರು ಕರ್ನಾಟಕ ಉಚ್ಛ ನ್ಯಾಯಾಲಯದ ವಕೀಲರಾದ ಮಧುಸೂದನ್ ಇವರು 03 ಹೊಸ ಕಾನೂನುಗಳ ವಿಷಯದ ಬಗ್ಗೆ ಮಂಡಿಸಿದರು.



ಕಾರ್ಯಗಾರವನ್ನು ಪ್ರಿನ್ಸಿಪಲ್ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರು ಕೆ.ಜಿ.ಶಾಂತಿ ಅವರು ಉದ್ಘಾಟನೆ ಮಾಡಿದರು. ಕಾರ್ಯಗಾರದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ವಕೀಲರು ಮಲ್ಲಿಕಾರ್ಜುನ ಆರ್. ಎಂ, ಕೆ.ಎಲ್.ಇ ಲಾ ಕಾಲೇಜ್‌ನ ಪ್ರೋಪೆಸರ್ ಡಾ. ಎಸ್.ಜಿ.ಗೌಡಪ್ಪಗೌಡರ್ ಕರ್ನಾಟಕಉಚ್ಛನ್ಯಾಯಾಲಯದ ವಕೀಲ ಮಧುಸೂದನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಗೋಪಾಲ ಬ್ಯಾಕೋಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿ.ಬರಮನಿ, ಪ್ರಾಂಶುಪಾಲ ಎಂ. ಎಂ. ಯಾದವಾಡ. ಹಾಗೂ ಪಿಟಿಎಸ್‌ನ ಅಧಿಕಾರಿ ಹಾಗೂ ಸಿಬ್ಬಂದಿಯವರು, ಆಂತರಿಕ ಭದ್ರತಾ ವಿಭಾಗದ ಅಧಿಕಾರಿ, ರಾಜ್ಯ ಗುಪ್ತವಾರ್ತೆ ಅಧಿಕಾರಿ, ಲೋಕಾಯುಕ್ತ ಇಲಾಖೆಯ ಅಧಿಕಾರಿ, ಜಿಲ್ಲೆಯ ತಹಶೀಲ್ದಾರ ಹಂತದ ಅಧಿಕಾರಿಗಳು ಹಾಗೂ ಕರ್ನಾಟಕ ಕಾಲೇಜಿನ ಕಲಾ, ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹಾಗೂ ಹುರುಕಡ್ಲಿ ಅಜ್ಜ ಕಾನೂನು ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಬಾಲ ಕಾರ್ಮಿಕರನ್ನು ಶಾಲೆಗೆ ಸೇರಿಸಿ

**ರಬಕವಿ–ಬನಹಟ್ಟಿ :** ಬಾಲ ಕಾರ್ಮಿಕರನ್ನು ಕೆಲಸಕ್ಕೆ ಇಟ್ಟುಕೊಳ್ಳಬಾರದು. ವಿದ್ಯಾರ್ಥಿಗಳಿಗೆ ತಮ್ಮ ಸುತ್ತ ಮುತ್ತಲಿನ ಪ್ರದೇಶದಲ್ಲಿ ಬಾಲ ಕಾರ್ಮಿಕರು ಕಂಡು ಬಂದರೆ ಅಂಥವರನ್ನು ಕರೆದುಕೊಂಡು ಬಂದು ಶಾಲೆಗೆ ಸೇರಿಸಬೇಕು. ಸರ್ಕಾರ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿರುವುದರಿಂದ ಪ್ರತಿಯೊಂದು ಮಗು ಶಿಕ್ಷಣವನ್ನು ಪಡೆದುಕೊಳ್ಳಬೇಕು. ಬಾಲ ಕಾರ್ಮಿಕರು ಕಂಡು ಬಂದರೆ ಕೂಡಲೇ ಮಕ್ಕಳ ಸಹಾಯವಾಣಿ 1098 ಕರೆ ಮಾಡಿ ಎಂದು ಬನಹಟ್ಟಿ ಕಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶೆ ಸುಷ್ಮ ಟಿ. ಸಿ ತಿಳಿಸಿದರು.



ಶುಕ್ರವಾರ ತಾಲ್ಲೂಕಿನ ಹಿಪ್ಪರಗಿ ಗ್ರಾಮದ ಸಂಗಮೇಶ್ವರ ಮಠದ ಆವರಣದಲ್ಲಿ ಕಾನೂನು ಸೇವಾ ಪ್ರಾಧಿಕಾರ ಮತ್ತು ವಿವಿಧ ಇಲಾಖೆಗಳ ಆಶ್ರಯದಲ್ಲಿ ನಡೆದ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಮಿಕ ಇಲಾಖೆಯ ಅಧಿಕಾರಿ ಪಿ. ವಿ. ಮಾವುರಕರ್ ಮಾತನಾಡಿ, ಬಾಲ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದು ಅಪರಾಧವಾಗಿದೆ. ಬಾಲ ಕಾರ್ಮಿಕರನ್ನು ನೇಮಿಸಿಕೊಂಡವರಿಗೆ ರೂ. 20 ಸಾವಿರದಿಂದ ರೂ. 50 ಸಾವಿರದವರೆಗೆ ದಂಡ ಮತ್ತು ಆರು ತಿಂಗಳುಗಳ ಕಾಲ ಜೈಲು ಶಿಕ್ಷೆಯನ್ನು ವಿಧಿಸಲಾಗುವುದು ಎಂದು ತಿಳಿಸಿದರು.

ಹಿಪ್ಪರಗಿ ಸಂಗಮೇಶ್ವರ ಮಠದ ಪ್ರಭು ಬೆನ್ನಾಳೆ ಮಹಾರಾಜರು ಸಾನ್ನಿಧ್ಯ ವಹಿಸಿ ಮಾತನಾಡಿ, ಮಕ್ಕಳು ದೇಶದ ಸಂಪತ್ತು. ಮಕ್ಕಳನ್ನು ಬಾಲ ಕಾರ್ಮಿಕರನ್ನಾಗಿಸದೇ ಅವರನ್ನು ಶಾಲೆಗೆ ಸೇರಿಸುವ ಕಾರ್ಯವನ್ನು ಪಾಲಕರು ಮಾಡಬೇಕು ಎಂದು ತಿಳಿಸಿದರು.

ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ, ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಲಕ್ಕವ್ವ ದಂಡಿಮನಿ, ವಕೀಲರ ಸಂಘದ ಕಾರ್ಯದರ್ಶಿ ಎಸ್. ಜಿ. ಸಲಬನ್ನವರ, ಶಿರಸ್ತೆದಾರ ಎಸ್. ಎಲ್. ಕಾಗಿಯವರ, ಶಿಕ್ಷಣ ಇಲಾಖೆಯ ಅಧಿಕಾರಿ ಬಿ. ಎಂ. ಹಳೆಮನಿ, ಎ.ಎಸ್.ಐ. ಬಾಬಾನಗರ, ಪಿ. ಜಿ. ಪಾಟೀಲ, ಪಿಡಿಓ ಶಿವಲಿಂಗ ವಾಲಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಇಗ್ನೋ ಪರೀಕ್ಷೆ ಬರೆದ 83 ವಯಸ್ಸಿನ ನಿವೃತ್ತ ನೌಕರ

**ವಿಜಯಪುರ :** ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಜೆ. ಎಸ್. ಎಸ್. ಮಹಾ ವಿದ್ಯಾಲಯದಲ್ಲಿ ಇರುವ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (ಇಗ್ನೊ) ಕೇಂದ್ರ ಆಯೋಜಿಸಿರುವ ಎಂ. ಎ. ಇಂಗ್ಲಿ?ಿ ಪರೀಕ್ಷೆಗೆ 83 ವರ್ಷ ಮತ್ತು 68 ವರ್ಷದ ಹಿರಿಯರು ಹಾಜರಾಗಿ ಪರೀಕ್ಷೆ ಬರೆಯುವ ಮೂಲಕ ಗಮನ ಸೆಳೆದಿದ್ದಾರೆ. ಶುಕ್ರವಾರ ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ಇಂಗ್ಲಿ?ಿ ಪರೀಕ್ಷೆ ನಡೆಯಿತು. ಈ ವೇಳೆ ಬಾಗಲಕೋಟೆ ಜಿಲ್ಲೆಯ ಇಳಕಲ್ ತಾಲೂಕಿನ ಗುಡೂರಿನ 83 ವರ್ಷದ ನಿಂಗಯ್ಯ ಬಸಯ್ಯ ಒಡೆಯರ ಮತ್ತು ವಿಜಯಪುರ ಜಿಲ್ಲೆಯ ಸಿಂದಗಿಯ 68 ವರ್ಷದ ಪಿ. ಎಂ. ಮಡಿವಾಳ ಹಾಗೂ ನಾಲ್ಕೈದು ವರ್ಷದಲ್ಲಿ ಸೇವಾ ನಿವೃತ್ತಿಯಾಗಲಿರುವ ಶಿವಮೊಗ್ಗದ 55 ವರ್ಷದ ಕಲಾ ಶಿಕ್ಷಕ ನಾಗನಗೌಡ ಎ. ಪಾಟೀಲ ಪರೀಕ್ಷೆ ಬರೆದು ಗಮನ ಸೆಳೆದರು.

ಈ ಪರೀಕ್ಷೆಯ ಕುರಿತು ಪ್ರತಿಕ್ರಿಯೆ ನೀಡಿದ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ಮತ್ತು ಇಗ್ನೊ ಅಧ್ಯಯನ ಕೇಂದ್ರದ ಸಂಯೋಜಕ ಡಾ. ಮಂಜುನಾಥ ಕೋರಿ ಮಾತನಾಡಿ, ನಮ್ಮ ಬಿ. ಎಲ್. ಡಿ. ಇ ಸಂಸ್ಥೆಯ ಜೆ. ಎಸ್. ಎಸ್. ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಇರುವ ಇಗ್ನೋ ಕೇಂದ್ರದಲ್ಲಿ ಸಾಕಷ್ಟು ಜನ ಹಿರಿಯ ನಾಗರಿಕರು ಪರೀಕ್ಷೆ ಬರೆಯುತ್ತಿದ್ದಾರೆ. ಯುವಕರಿಗೂಇವರುಸ್ಫೂರ್ತಿಯಾಗಿದ್ದಾರೆ. ಇಲ್ಲಿ ಎಲ್ಲ ಸೌಲಭ್ಯಗಳು ಲಭ್ಯವಿವೆ. ಅತೀ ಕಡಿಮೆ ಖರ್ಚಿನಲ್ಲಿ ಪದವಿ, ಸ್ನಾತಕೋತ್ತರ ಪದವಿ, ಸರ್ಟಿಫಿಕೇಟ್ ಲಭ್ಯವಿವೆ. ಬಾಹ್ಯ ಪರೀಕ್ಷೆ ಬರೆಯುವವರಿಗೆ ಉತ್ತಮ ವಾತಾವರಣವಿದೆ. 85 ವರ್ಷದ ಹಿರಿಯರು, 65 ವರ್ಷದ ಹಿರಿಯರು, 55 ವರ್ಷದ ಹಿರಿಯರು ಪರೀಕ್ಷೆ ಬರೆದಿದ್ದಾರೆ. ನಿವೃತ್ತ ನೌಕರರು ಶಿಕ್ಷಣದ ಬಗ್ಗೆ ಆಸಕ್ತಿ ಹೊಂದಿ ಪರೀಕ್ಷೆ ಬರೆಯುತ್ತಿರುವುದು ನನಗೆ ಖುಷಿ ಎನಿಸುತ್ತಿದೆ. ಈಗ ಇಂಗ್ಲಿಷ್ ಪರೀಕ್ಷೆಗೆ 25 ವಿದ್ಯಾರ್ಥಿಗಳು ಹಾಜರಾಗಿದ್ದಾರೆ ಎಂದು ತಿಳಿಸಿದರು.

ವಿಜಯಪುರ ಇಗ್ನೊ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಡಾ. ರವಿಕಾಂತ ಕಮಲೇಕರ, ಇಂದು ಪರೀಕ್ಷೆ ಆರಂಭವಾಗಿದ್ದು, ಜುಲೈ 15ರ ವರೆಗೆ ಪರೀಕ್ಷೆಗಳು ನಡೆಯಲಿವೆ. ಇಲ್ಲಿ ಸರ್ಟಿಫಿಕೇಟ್ ಕೋರ್ಸ್‌ನಿಂದ ಹಿಡಿದು, ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊ?ಲೀಮಾ ಕೋರ್ಸುಗಳು ಲಭ್ಯವಿವೆ. ಹಿರಿಯನಾಗರಿಕರೂಉತ್ಸಾಹದಿಂದಪರೀಕ್ಷೆ ಬರೆಯುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲಿ ನಾವು 12 ಜಿಲ್ಲೆಗಳು ಮತ್ತು ಮಹಾರಾಷ್ಟ್ರದ ಎರಡು ಜಿಲ್ಲೆಗಳು ನಮ್ಮ ಇಗ್ನೋ ಕೇಂದ್ರದ ವ್ಯಾಪ್ತಿಯಲ್ಲಿ ಬರುತ್ತವೆ. ಉತ್ಸಾಹದಿಂದ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಿರುವುದು ಗಮನಾರ್ಹವಾಗಿದೆ ಎಂದು ತಿಳಿಸಿದರು.

83 ಇಳಿಯ ವಯಸ್ಸಿನಲ್ಲಿ ಪರೀಕ್ಷೆ ಬರೆಯುತ್ತಿರುವ ಕುರಿತು ಮಾತನಾಡಿದ ನಿಂಗಯ್ಯ ಬಸಯ್ಯ ಒಡೆಯರ, ನಾನೊಬ್ಬ ಆರೋಗ್ಯ ಇಲಾಖೆಯ ನಿವೃತ್ತ ನೌಕರ. 2000ನೇ ಇಸವಿಯಲ್ಲಿ ನಿವೃತ್ತಿಯಾಗಿದ್ದೇನೆ. ನಾನು ಬಡತನದಿಂದ ಬಂದಿದ್ದೇನೆ. ಸಾಹಿತ್ಯ ರಚನೆ ಮಾಡಿದ್ದೇನೆ. 15 ಕೃತಿಗಳು ಕನ್ನಡದಲ್ಲಿ ಪ್ರಕಟವಾಗಿವೆ. ಹಿಂದಿ, ಇಂಗ್ಲಿ?ಿ, ಕನ್ನಡ ಮತ್ತು ಸಂಸ್ಕೃತ ಭಾ?ಗಳಲ್ಲಿ ಅಭ್ಯಾಸ ಮಾಡುತ್ತ ಸಾಹಿತ್ಯವನ್ನು ಬೆಳೆಸಲು ಪ್ರಯತ್ನಿಸುತ್ತಿದ್ದೇನೆ.

ನನಗೆ ವಯಸ್ಸಾದರೂ ಆಸಕ್ತಿ ಕಡಿಮೆಯಾಗಿಲ್ಲ. ಯಾವಾಗ ನಾವು ಕಲಿಯುವುದನ್ನು ಬಿಡುತ್ತೇವೋ ಆವಾಗ ಅದು ಕಬ್ಬಿಣ ತುಕ್ಕು ಹಿಡಿದಂತಾಗುತ್ತದೆ. ಹೀಗಾಗಿ ಆಗಾಗ, ಚರ್ಚೆ, ಅಧ್ಯಯನ, ಪರೀಕ್ಷೆ, ಸಾಹಿತ್ಯದ ಆಸಕ್ತಿ ಬೆಳೆಸಿಕೊಂಡರೆ ಜ್ಞಾಪಕ ಶಕ್ತಿ ಬೆಳೆಯುತ್ತದೆ. ಇದು ನಾನು ಬರೆಯುತ್ತಿರುವ ಐದನೇ ಪರೀಕ್ಷೆಯಾಗಿದೆ. ಈಗಾಗಲೇ ಕನ್ನಡ, ಇಂಗ್ಲಿ?ಿ, ಹಿಂದಿ ಮತ್ತು ಸಮಾಜ ಶಾಸ್ತ್ರ ವಿಷಯಗಳಲ್ಲಿ ಎಂ. ಎ. ಮಾಡಿದ್ದೇನೆ. 1956ರಲ್ಲಿ ನಾನು ಮೊದಲು ಶಾಲೆಗೆ ಸೇರಿ ಒಂದನೇ ತರಗತಿಯಲ್ಲಿ ಪರೀಕ್ಷೆ ಬರೆದೆ. ಅದೇ ಉತ್ಸಾಹ ಈಗಲೂ ಇದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಿಂದಗಿಯ ನಿವೃತ್ತ ಉಪನ್ಯಾಸಕ ಪಿ.ಎಂ. ಮಡಿವಾಳ ಮಾತನಾಡಿ, ಈಗ ನನಗೆ 68 ವರ್ಷ ವಯಸ್ಸಾಗಿದೆ. ನನ್ನ ಮಗಳು ಈ ಮುಂಚೆ ಇಗ್ನೋದಿಂದ ಪರೀಕ್ಷೆಗೆ ಅರ್ಜಿ ಸಲ್ಲಿಸಿದಾಗ ನಾನೂ ಕೂಡ ಅವಳೊಂದಿಗೆ ಅರ್ಜಿ ಹಾಕಿದೆ. ಇಗ್ನೋ ಉತ್ತಮವಾಗಿ ಪರೀಕ್ಷೆ ನಡೆಸುತ್ತಿದ್ದು, ಎಲ್ಲ ಪರೀಕ್ಷಾರ್ಥಿಗಳ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಓರ್ವ ಪ್ರಾಧ್ಯಾಪಕನಾಗಿ ದಿನನಿತ್ಯ ಅಧ್ಯಯನಶೀಲನಾಗಿರಬೇಕು. ಜ್ಞಾನ ಸಂಪಾದನೆ ಮಾಡಬೇಕು. ಹೊಸ ಹೊಸ ಪುಸ್ತಕಗಳನ್ನು ಓದುವುದು, ಸಂಶೋಧನೆಗಳ ಬಗ್ಗೆ ಅಧ್ಯಯನ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆ ಮಾಡಬಹುದು. ನಮ್ಮ ಸಂಸ್ಕೃತಿ ಬೆಳೆಯಲು ಇದು ನಾಂದಿಯಾಗುತ್ತಿದೆ ಎಂದು ಹೇಳಿದರು.

ಪರೀಕ್ಷೆಯ ಬಳಿಕ ಕಾಲೇಜಿನ ಪ್ರಾಚಾರ್ಯೆ ಮತ್ತು ಇಗ್ನೋ ಅಧ್ಯಯನ ಕೇಂದ್ರದ ಮೇಲ್ವಿಚಾರಕಿ ಡಾ. ಭಾರತಿ ವೈ. ಖಾಸನೀಸ್, ಅಧ್ಯಯನ ಕೇಂದ್ರದ ನಿರ್ದೇಶಕ ಡಾ. ರವಿಕಾಂತ ಕಮಲೇಕರ, ಸಂಯೋಜಕ ಡಾ. ಮಂಜುನಾಥ ಕೋರಿ ಅವರು ಹಿರಿಯ ವಯಸ್ಸಿನಲ್ಲಿ ಪರೀಕ್ಷೆ ಬರೆದು ಇತರರಿಗೆ ಮಾದರಿಯಾದ ನಿಂಗಯ್ಯ ಬಸಯ್ಯ ಒಡೆಯರ, ಪಿ. ಎಂ. ಮಡಿವಾಳ ಮತ್ತು ನಾಗನಗೌಡ ಎ ಪಾಟೀಲ ಅವರಿಗೆ ಶುಭಾಷಯ ಕೋರಿದರು.

# ಗಿಡ ನೆಟ್ಟು ಪ್ರಕೃತಿಯ ಋಣ ತೀರಿಸಿ: ಕುಬೇರ ದಲ್ಲಾಳಿ

**ಹೊಸಪೇಟೆ (ವಿಜಯನಗರ) :** ನಗರದ ಹೊರಹೊಲಯದ ಕೊಂಡ ನಾಯಕನ ಹಳ್ಳಿಯಲ್ಲಿ ಇರುವ ಶ್ರೀ ಯಾಲ್ಲಾಲಿಂಗ ದೇವಸ್ಥಾನ ಆವರಣದಲ್ಲಿ ಅಹಿಂದ ಯುವ ವೇದಿಕೆ ತಾಲೂಕು ಮತ್ತು .ಅನಂತೇಶನ ಗುಡಿ ಅಹಿಂದ ಯುವ ವೇದಿಕೆ 7 ನೇ ವಾರ್ಡ್ ಘಟಕದಿಂದ ಇಂದು ಸಸಿ ನೆಡುವ ಕಾರ್ಯಕ್ರಮವನ್ನುಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮವನ್ನು



ಕರ್ನಾಟಕ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಿ.ಹೆಚ್. ಎಸ್.ರಾಜು ಅವರು ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಅಹಿಂದ ವೇದಿಕೆಯ ತಾಲೂಕು ಅಧ್ಯಕ್ಷ ಕುಬೇರ ದಲ್ಲಾಳಿ ಮಾತನಾಡಿ ಅಹಿಂದ ವೇದಿಕೆ ಎರಡನೇ ಅವಧಿಗೂ ಸಸಿನೆಡುವ ಕಾರ್ಯಕ್ರಮ ಮಾಡುತ್ತಿದ್ದೇವೆ

ಎಂದು ಹೇಳಿದರು. ಪ್ರಕೃತಿಯಿಂದ ಹಲವು ರೀತಿಯ ಪ್ರಯೋಜನಗಳನ್ನು ಪಡೆಯುವ ನಾವು ಗಿಡಗಳನ್ನು ನೆಟ್ಟು ಬೆಳೆಸುವುದರ ಮೂಲಕ ಪ್ರಕೃತಿಯ ಋಣವನ್ನು ತೀರಿಸಬೇಕಿದೆ ಎಂದರು.

ಮರಗಿಡಗಳುಪ್ರಕೃತಿಯಸಂಪತ್ತು.ಅವಿದ್ದರೆ ನಾವು. ಇಲ್ಲದಿದ್ದರೆ ನಮಗೆ ಅಸ್ತಿತ್ವವೇ ಇರುವುದಿಲ್ಲ.ಮಾನವತನ್ನದುರಾಸೆಯಿಂದ ಪರಿಸರದಮೇಲೆದಬ್ಬಾಳಿಕೆಮಾಡುತ್ತಿದ್ದಾನೆ. ಇದೇ ಪರಿಸ್ಥಿತಿ ಮುಂದುವರಿದರೆ ದೊಡ್ಡ ಗಂಡಾಂತರ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈಗಾಗಲೇ ಪರಿಸರ ನಾಶದಿಂದಾಗಿ ಹವಾಮಾನ ವೈಪರಿತ್ಯದಲ್ಲಿ ಸಾಕಷ್ಟು ಏರುಪೇರಾಗಿರುವುದನ್ನು ನಾವು ನೋಡುತ್ತಿದ್ದೇವೆ. ಪರಿಸರ ನಾಶದಿಂದ ಕಾಲ ಕಾಲಕ್ಕೆ ಸರಿಯಾಗಿ ಮಳೆಯಾಗದೆ ಎಲ್ಲೆಡೆ ಬರ ಆವರಿಸಿದೆ. ಹೀಗಾಗಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಬೇಕು. ಮುಂದಿನ ಪೀಳಿಗೆಗೆ ಉತ್ತಮ

ವಾತಾವರಣ ನಿರ್ಮಾಣ ಮಾಡುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು. ಪ್ರಕೃತಿ ವಿಕೋಪದಿಂದಾಗಿ ಈಗಾಗಲೇ ಹಲವೆಡೆ ಹಲವಾರು ಸಾವು ನೋವುಗಳಾಗಿರುವ ನಿದರ್ಶನಗಳು ನಮ್ಮ ಕಣ್ಣ ಮುಂದಿವೆ. ಈಗಲಾದರೂ ನಾವು ಎಚ್ಚೆತ್ತುಕೊಂಡು ಪ್ರತಿಯೊಬ್ಬರೂ ಒಂದು ಗಿಡವನ್ನು ನೆಟ್ಟು ಮಕ್ಕಳಂತೆ ಪೋಷಿಸಿ ಪರಿಸರ ಸಂರಕ್ಷಣೆಗೆ ಮುಂದಾಗೋಣ ಎಂದು ಹೇಳಿದರು.

ಗಿಡಗಳುನಮಗೆಒಳ್ಳೆಯವಾತಾವರಣವನ್ನು ನಿರ್ಮಿಸಿ, ಕಣ್ಣಿಗೆ ಅಂದವನ್ನು ಕೊಡುವುದರ ಜತೆಗೆ ಹಸಿರು ಮನಸ್ಸಿಗೆ ಮುದ ನೀಡುತ್ತದೆ.

ಗಿಡಮರಗಳನ್ನು ಬೆಳೆಸುವುದರಿಂದ ಪ್ರಕೃತಿಯ ಸಂರಕ್ಷಣೆಯಾದಂ ತಾಗುತ್ತದೆ. ಮಳೆ ಬೆಳೆ ಸಮೃದ್ಧಿಯಾಗುತ್ತದೆ. ಜೀವಿಗಳಿಗೆ ಬೇಕಾದ ಆಮ್ಲಜನಕವನ್ನು ಒದಗಿಸುತ್ತವೆ. ಇಷ್ಟೆಲ್ಲ ಪ್ರಯೋಜನ ನೀಡುವ ಗಿಡಗಳನ್ನು ಮನೆಯ ಮಕ್ಕಳಂತೆ ಸಾಕಿ ಸಲಹು ಬಾರದೇಕೆ ಎಂದು ಪ್ರಶ್ನಿಸಿದರು.ಸಸಿಗಳನ್ನು ನೆಡುವುದರಿಂದ ಪ್ರಕೃತಿಗೆ ನಿಮ್ಮದೇ ಆದ ಕೊಡುಗೆ ನೀಡಿದಂತಾಗುತ್ತದೆ. ಒಬ್ಬೊಬ್ಬರು ಒಂದು ಗಿಡ ನೆಟ್ಟರೆ ಒಂದು ವನವೇ ನಿರ್ಮಾಣವಾಗುತ್ತದೆ. ಬೇವಿನ ಮರದ ಹೊಂಗೆ ಮರ ಸೇರಿದಂತೆ ನಾನಾ ಮರಗಳಲ್ಲಿ ರೋಗ ನಿರೋಧಕ ಗುಣವಿರುವುದರಿಂದ ಔಷಧಗಳ ತಯಾರಿಕೆಗೂ ಉಪಯೋಗವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ. . ಅಹಿಂದ ಯುವ ಅಧ್ಯಕ್ಷರಾದ ಕೆ. ದೇವರಾಜ್. ಅಹಿಂದ ತಾಲೂಕು ಉಪಾಧ್ಯಕ್ಷರಾದ ಕೇಶವ. ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷರಾದ. ರಮೇಶ್ ಜಿಲ್ಲಾ ಸೇವದಳ ಅಧ್ಯಕ್ಷರಾದ ಬಿ. ಮಾರಣ್ಣ. ಕಾಂಗ್ರೆಸ್ ಪಕ್ಷದ ಮುಖಂಡರಾದ ಮಾರೇಪ್ಪಣ್ಣ. ಕಾಂಗ್ರೆಸ್ ಪಕ್ಷದ ಯುವ ಮುಖಂಡರಾದ ಭಾಷಾ..

ಕೊಂಡ ನಾಯಕನಹಳ್ಳಿ. ಗ್ರಾಮ ಘಟಕದ ಅಧ್ಯಕ್ಷರಾದ ರಫೀಕ್

ಕಾರಿಗನೂರು ಅಹಿಂದ ಘಟಕದ ಅಧ್ಯಕ್ಷರಾದ ಹನುಮಂತಪ್ಪ ಇಂಗಳಗಿ ಅಹಿಂದ ಪ್ರಧಾನ ಕಾರ್ಯದರ್ಶಿಯಾದ. ಬಸವರಾಜ್.ಅಹಿಂದ ತಾಲೂಕು ಉಪಾಧ್ಯಕ್ಷರಾದ. ಪಂಪಣ್ಣ ಕೆ.ತಾಲೂಕು ಇಂದ ಪ್ರಧಾನ ಕಾರ್ಯದರ್ಶಿಯಾದ ಬಸವರಾಜ್.ಪಿ.ಕಾಂಗ್ರೆಸ್ ಮುಖಂಡರಾದ ಗೋಪಾಲಕೃಷ್ಣ. ಕಾಂಗ್ರೆಸ್ ಯುವ ಮುಖಂಡ ಪೀರ್ ಸಾಬ,ನಾಗೇನಹಳ್ಳಿ ಘಟಕದ ಅಧ್ಯಕ್ಷರಾದ ನೂರು,ಅಹಿಂದ ಮಹಿಳಾ ಘಟಕದ ಅಧ್ಯಕ್ಷರಾದ ದಿಲ್ ಶಾದ್.ಲಕ್ಷ್ಮೀದೇವಿ ಸೇರಿದಂತೆ ಹಲವು ಜನರು ಉಪಸ್ಥಿತರಿದ್ದರು.

# ಜನಪದ ಕನ್ನಡ ಸಾಹಿತ್ಯದ ತಾಯಿ ಬೇರು: ಪ್ರೊ. ಟಿ.ಎಸ್. ವಂಟಗೂಡಿ

**ಇಂಗಳಿ :** ಕನ್ನಡ ಸಾಹಿತ್ಯಕ್ಕೆ ಹೊಸ ಶಕ್ತಿ ತುಂಬಿದ್ದು ಜನಪದ. ಇಂದು ನಮ್ಮ ಕನ್ನಡ ಸಾಹಿತ್ಯದಲ್ಲಿ ಸೊಗಸು, ಸೌಂದರ್ಯ ಶ್ರೀಮಂತಿಕೆ ತುಂಬಿಕೊಂಡಿದೆ ಎಂದರೆ ಅದಕ್ಕೆ ಮೂಲ ಜನಪದ ಸಾಹಿತ್ಯವೇ ಕಾರಣ ಹಾಗಾಗಿ ಜನಪದ ಕನ್ನಡ ಸಾಹಿತ್ಯದ ಮೂಲ ತಾಯಿ ಬೇರು ಎಂದು ಹಿಡಕಲ್ ಗ್ರಾಮದ ವಸಂತರಾವ ಪಾಟೀಲ್ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ ಟಿ ಎಸ್ ವಂಟಗೂಡಿ ಅಭಿಮತ ವ್ಯಕ್ತಪಡಿಸಿದರು.



ಅವರು ಸಮೀಪದ ಕೆ ಎಲ್ ಇ ಸಂಸ್ಥೆಯ ವಾಣಿಜ್ಯ ಪದವಿ ಮಹಾವಿದ್ಯಾಲಯ ಶಿರಗುಪ್ಪಿಯ ಎನ್ಎಸ್ಎಸ್ ಘಟಕದವರು ದತ್ತು ಗ್ರಾಮ ಇಂಗಳಿಯಲ್ಲಿ ಹಮ್ಮಿಕೊಂಡ ಎರಡನೇ ದಿನದ ವಿಶೇಷ ಶಿಬಿರದಲ್ಲಿ "ಜನಪದ ಸಾಹಿತ್ಯ ಮತ್ತು ಸಂಸ್ಕೃತಿ" ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಉಪನ್ಯಾಸ ನೀಡಿದರು. ಜನಪದ ಎಂಬುದು ವಿದ್ವಾಂಸರ ಪೆನ್ನಿನಿಂದ ಬಂದ ಸಾಹಿತ್ಯವಲ್ಲ, ಮಣ್ಣಿನಲ್ಲಿ ಬೆವರು ಕಲಿಸಿ ದುಡಿಯುವವರ ಬೆನ್ನಿನ ಬೆವರಿನ ಸಾಹಿತ್ಯವೇ ಜನಪದ ಎಂದು ಮಾರ್ಮಿಕವಾಗಿ ವ್ಯಾಖ್ಯಾನಿಸಿದರು. ವಿಶ್ವ ಸಾಹಿತ್ಯಕ್ಕೆ ಜನಪದ ಸಾಹಿತ್ಯದ ಕೊಡುಗೆ ಅತ್ಯಂತ ಅಪಾರವಾದದ್ದು. ಜನಪದರ ಪಟ್ಟ ಪಾಡೆಲ್ಲವೂ ಹಾಡಾಯಿತು. ಆಧುನಿಕ ಕನ್ನಡ ಕವಿಗಳಿಗೆ ಮೂಲ ದಿವ್ಯ ಪ್ರೇರಣೆಯಾದ ಜನಪದ ಸಾಹಿತ್ಯದ ಹರವು ಅತ್ಯಂತ ವಿಶಾಲವಾದದ್ದು ಆಳವಾದದ್ದು. ಗಾದೆ ಒಗಟು ಒಡಪು ಕೋಲಾಟ ಗೀಗಿ ಪದ ಹಂತಿ ಪದ ಭಜನಾಪದ ಸೋಬಾನೆ ಪದಗಳಲ್ಲಿ ಹುದುಗಿಕೊಂಡ ಸತ್ವಯುತ ಈ ಜನಪದ ಸಾಹಿತ್ಯ ಅತ್ಯಂತ ಮೌಲಿಕವಾದದ್ದು. ಜನಪದ ಸಾಹಿತ್ಯ ಕಾಸಿ ಆರಿಸಿದ ಹಾಲು ಇದ್ದಾಂಗ ಎಂದು ಸೊಗಸಾಗಿ ವಿಶ್ಲೇಷಿಸಿದರು.

ಜನಪದರು ಯಾವುದೇ ಶಾಲೆ ಕಾಲೇಜಿಗೆ ಹೋಗದೆ ಮೂರು ಸಾಲುಗಳಲ್ಲಿ ಮೂರು ಲೋಕದ ಅನುಭವಗಳನ್ನ ಅತ್ಯಂತ ಚೆನ್ನಾಗಿ ಅನಾವರಣಗೊಳಿಸಿದ್ದು ಗಮನಾರ್ಹ ಸಂಗತಿ ಎಂದರು. ಜನಪದ ಸಾಹಿತ್ಯದಲ್ಲಿ ಅಡಗಿಕೊಂಡ ನೈಜ ಅರ್ಥ ಚಮತ್ಕಾರ ನಿಜಕ್ಕೂ ಬೆರಗುಗೊಳಿಸುವಂತದ್ದು. ಸಾಂದರ್ಭಿಕವಾಗಿ ಕೆಲವು ಜನಪದ ತ್ರಿಪದಿಗಳನ್ನು ವಂಟಗೂಡಿ ಅವರು ಸುಶ್ರಾವ್ಯವಾಗಿ ಹಾಡಿ ಮನಸೂರೆಗೊಂಡರು.ಇದಕ್ಕೂ ಮೊದಲು ಆಗಮಿಸಿದ ಗಣ್ಯರು ಜ್ಯೋತಿ ಪ್ರಜ್ವಲನಗೊಳಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಾಂದರ್ಭಿಕವಾಗಿ ಕು. ಪ್ರಿಯಂಕಾ ಡಂಗ್ ಹಾಗೂ ಸಂಗಡಿಗರು ಸಾಮೂಹಿಕ ಜನಪದ ಗೀತೆಗೆ ಕಂಠ ದಾನ ಮಾಡಿದರು. ಘನ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು, ಸಾಹಿತಿ ಡಾ ಜಯವೀರ ಎ.ಕೆ. ಜನಪದ ಅನುಭವಗಳ ಪ್ರತಿಫಲನದಿಂದ ಹೊರಹೊಮ್ಮಿದ ಜನಪದ ಸಾಹಿತ್ಯವು ನಮ್ಮ ಕನ್ನಡ ಸಾಹಿತ್ಯ ಸಮೃದ್ಧಿಯನ್ನು ಇಮ್ಮಡಿಗೊಳಿಸಿದೆ. ಮೂಲ ಜನಪದ ಸಾಹಿತ್ಯ ಇಂದು ನಮ್ಮಿಂದ ಕಣ್ಮರೆಯಾಗುತ್ತಿರುವುದು ಅತ್ಯಂತ ವಿಷಾದನೀಯ. ಈ ಜಾಗತೀಕರಣದ ಕಾಲಘಟ್ಟದಲ್ಲಿ ಆಧುನಿಕ ಜೀವನ ಶೈಲಿಯ ಪರಿಣಾಮಗಳಿಂದ ಜನರ ಅಭಿರುಚಿಯು ಬದಲಾವಣೆಯಾಗುತ್ತಿದೆ. ಇತ್ತೀಚಿನ ಅಶ್ಲೀಲ ಜನಪದ ಸಾಹಿತ್ಯ ಜನಮನವನ್ನು ಗಾಢವಾಗಿ ಆಕರ್ಷಿಸುತ್ತಿರುವುದು ಸೋಜಿಗ ಎಂದು ಆಶಯ ನುಡಿಗಳ ಮೂಲಕ ಹಂಚಿಕೊಂಡರು.

# ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ



**ಬನಹಟ್ಟಿ :** ಸರ್ಕಾರಿ ಶಾಲೆಗಳನ್ನು ನಿರ್ಲಕ್ಷ್ಯ ಮಾಡದೆ ಅವುಗಳನ್ನು ಸದೃಢಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ನಗರಸಭೆ ಸದಸ್ಯ ಶಿವಾನಂದ ಬುದ್ನಿ ಹೇಳಿದರು.

ಬನಹಟ್ಟಿಯ ಕೆಎಚ್ಡಿಸಿ ಕಾಲನಿಯ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಶುಕ್ರವಾರ ಸರ್ಕಾರ ನೀಡಿರುವ ಶಾಲಾ ಸಮವಸ್ತ್ರ ವಿತರಿಸಿ ಅವರು ಮಾತನಾಡಿದರು. ಈ ವರ್ಷವೂ ಮಕ್ಕಳನ್ನು ಕರೆ ತರಲು ಶಾಲಾ ಸಲಹಾ ಸಮಿತಿಯಿಂದ ವಿವಿಧ ಸೌಲಭ್ಯಗಳನ್ನು ಮುಂದುವರೆಸಲಾಗಿದೆ ಎಂದು ಸಮಿತಿ ಅಧ್ಯಕ್ಷ ನಿಜಲಿಂಗಪ್ಪ ಅಮಟಿ ತಿಳಿಸಿದರು.

ಮುಖ್ಯ ಶಿಕ್ಷಕ ಸಿ. ಎಚ್. ಬುದ್ನಿ ಮಾತನಾಡಿದರು.

ಎಸ್ಡಿಎಂಸಿ ಉಪಾಧ್ಯಕ್ಷ ಸದಾಶಿವ ಭಸ್ಮೆ, ಮಹಾನಿಂಗ ಮಟ್ಟಿಕಲ್ಲಿ, ಬಸವ್ವ ಬಂಗಿ,

ಬಿ. ವಿ. ತೆಗ್ಗಿ, ಎಸ್. ಪಿ. ಮಿರ್ಜಿ, ಎಚ್. ಜಿ. ಜೀರಂಕಲಗಿ, ಪ್ರದೀಪ ಕರಡಿ, ಸಿ. ಬಿ. ಜೈನಾಪುರ, ಎಸ್. ಎಂ. ಕಿತ್ತೂರ, ವಿ. ಜಿ. ಆಸಂಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಶಾಸಕರಿಂದ ಸಸಾಲಟ್ಟಿ ಕೆರೆಗೆ ಬಾಗಿನ ಅರ್ಪಣೆ



**ತೇರದಾಳ :** ಇದೇ ಮೊದಲ ಬಾರಿಗೆ ಸಸಾಲಟ್ಟಿ ಕೆರೆಗೆ ಶಾಸಕ ಸಿದ್ದು ಸವದಿ ಶುಕ್ರವಾರ ಬಾಗಿನ ಅರ್ಪಿಸಿ ಮಳೆ ಬೆಳೆ ಚನ್ನಾಗಿ ಬರಲಿ. ನಾಡಿನಲ್ಲಿ ಶಾಂತಿ ನೆಲಿಸಲಿ ಎಂದು ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಸವದಿ, ಭಾರತ ದೇಶದಲ್ಲಿ ಸಂಸ್ಕೃತಿ ಮತ್ತು ಅವುಗಳ ಆಚರಣೆಯಿಂದಲೇ ದೇಶ ಸಮೃದ್ಧ ರಾಷ್ಟ್ರ ಆಗುತ್ತಿದೆ. ತಂತ್ರಜ್ಞಾನ ಎಷ್ಟೇ ಬೆಳೆದರು ನಮ್ಮ ದೇಶದ ಸಂಸ್ಕೃತಿಯನ್ನು ಮಾತ್ರ ಯಾರು ಬಿಡಬಾರದು. ಬಾಗಿನ ಅರ್ಪಣೆಯಿಂದ ಸಂತಸವಾಗಿದೆ ಎಂದು ಹೇಳಿದರು. ಕೇಂದ್ರ ಸರಕಾರದ ಅಗ್ನಿಪಥಗೆ ಆಯ್ಕೆಗೊಂಡ ಗ್ರಾಮದ ಪ್ರಮೋದ ಭದ್ರಶೆಟ್ಟಿ ಹಾಗೂ ರಾಜು ನಿರ್ವಾಣಿ ಅವರನ್ನು ಶಾಸಕ ಸಿದ್ದು ಸವದಿ ಸನ್ಮಾನಿಸಿ ಅಭಿನಂದಿಸಿದರು. ಪಿಕೆಪಿಎಸ್ ಅಧ್ಯಕ್ಷ ಗುರುಬಸು ಹುಕ್ಕೇರಿ, ಪ್ರಕಾಶ ಮಾನಶೆಟ್ಟಿ, ಅಶೋಕ ಸಂತಿ,

ಮುತ್ತು ಭದ್ರಶೆಟ್ಟಿ, ರಾಜು ಬೆಳವಣಿಕಿ, ರಾಜು ಪಾಟೀಲ, ಮಡೆಪ್ಪ ಪಾಲಬಾಂವಿ, ಸಿದ್ದಬೀರ ಶೇಗುಣಸಿ, ಹುಲೆಪ್ಪ ಹುಕ್ಕೇರಿ, ಶ್ರೀಮಂತ ಶೇಗುಣಸಿ, ಜಕ್ಕಪ್ಪ ಜಲಪೂರ, ಬನಪ್ಪ ಸಲಬನ್ನವರ, ಚನ್ನಪ್ಪ ಮರಡಿ, ಪ್ರಕಾಶ ಭದ್ರಶೆಟ್ಟಿ, ಶಿವನಿಂಗ ಮಾಲಗಾಂವಿ ಮತ್ತಿತರಿದ್ದರು.

# ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ಸಿಜಿಎಂ ಉಪಕರಣ ಸಹಾಯಕ: ಡಾ. ಶಫಿವುಲ್ಲಾ

**ಕೊಪ್ಪಳ :** ಸಿಜಿಎಂ ಸೆನ್ಸಾರ್ ನಿರಂತರವಾಗಿ ಗ್ಲುಕೋಸ್ ಮಟ್ಟದ ಮಾಹಿತಿಯನ್ನು ಒದಗಿಸುತ್ತವೆ, ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ಸಿಜಿಎಂ ತುಂಬಾ ಸಹಾಯಕವಾಗಿದೆ ಇದರ ಸದುಪಯೋಗ ಪಡೆದು ಕೊಳ್ಳಬಹುದಾಗಿದೆ ಎಂದು ಸಕ್ಕರೆ ಕಾಯಿಲೆ ತಜ್ಞ ಡಾ, ಶಫಿವುಲ್ಲಾ ಹೇಳಿದರು



ಅವರು ಶನಿವಾರ ಬೆಳಗ್ಗೆ ತಮ್ಮ ಸಿಟಿ ಶುಗರ್ ಕ್ಲಿನಿಕ್ಆಸ್ಪತ್ರೆಯಲ್ಲಿ ಏರ್ಪಡಿಸಿದ ಉಚಿತ ಸಕ್ಕರೆ ಕಾಯಿಲೆ ಚಿಕಿತ್ಸಾ ಶಿಬಿರದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿ ಈ ಕಾಯಿಲೆ ಬಗ್ಗೆ ಮತ್ತು ಇದರ ನಿಯಂತ್ರಣದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಇದರ ಸದುಪಯೋಗ ಪಡೆದುಕೊಳ್ಳುವಂತೆ, ರೋಗಿಗಳಲ್ಲಿ ಅವರು ಮನವಿ ಮಾಡಿಕೊಂಡರು.

ಶಿಬಿರದಲ್ಲಿ ಹಿರಿಯ ವೈದ್ಯ ಡಾ, ಟಿ ಎಚ್ ಮುಲ್ಲ ಡಾ,ಆನಂದ್ ಹಿರಿಯ ಸಮಾಜಸೇವಕರಾದ ಅಯ್ಯುಬ ಹೂರ ಕಡಲಿ ಹಿರಿಯ ಪತ್ರಕರ್ತ ಎಂ ಸಾಧಿಕಲಿ.ರೀಚ್ 52 ಏನ್. ಜಿ. ಓ ಅನೇಕರು ಪಾಲ್ಗೊಂಡಿದ್ದರು. ಶಿಬಿರದಲ್ಲಿ ಪ್ರಾಯೋಗಿಕವಾಗಿ ಯು. ಎಸ್. ವಿ ಕಂಪನಿ ಮೂಲಕ ಸಾವಿರಾರು ವೆಚ್ಚದ ಉಪಕರಣ ಅಳವಡಿಸಿ ಸಕ್ಕರೆ ಕಾಯಿಲೆ ರೋಗಿ ಬಡ ಮಕ್ಕಳಾದ ಚುಕುನ್ಕಲ್ ಗ್ರಾಮದ ಜಯಶ್ರೀ, ತಾವರಗೆರೆಯ ನಗಮ, ಭಾಗ್ಯನಗರದ ರಸೂಲ್,

ಹುಲಿಗಿ ಗ್ರಾಮದ ಲಿಖಿತ ಪಕ್ಕದ ಮುಂಡರಗಿ ಪಟ್ಟಣದ ಚಂದ್ರಶೇಖರ್ ರವರಿಗೆ ಉಚಿತವಾಗಿ ಸಕ್ಕರೆ ಕಾಯಿಲೆ ಚಿಕಿತ್ಸೆ ನೀಡಲಾಯಿತು

ಸಾವಿರಾರು ರೂ ವೆಚ್ಚದ ಈ ಸೆನ್ಸಾರ್ ಅಳವಡಿಕೆ ಮಾಡಿಕೊಂಡು ಬಡ ರೋಗಿ ಮಕ್ಕಳಿಗೆ ಉಚಿತವಾಗಿ ಚಿಕಿತ್ಸೆ ನೀಡಿದ ಈ ಶಿಬಿರದಲ್ಲಿ ಉಪಸ್ಥಿತರಿದ್ದ ಪಾಲಕರು ಸಂಸ್ಥೆಯ ಮತ್ತು ವೈದ್ಯರ ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.




**KASHIRAY KANNAL ( KSP ) SUCCESS STORY'** ಮುಂಡಗೋಡ ಠಾಣೆಯಲ್ಲಿ ಎರಡು ವರ್ಷಗಳ ಕಾಲ ಅತ್ಯುತ್ತಮ ಜನಸ್ನೇಹಿ ಪೊಲೀಸ್ ಆಗಿ ಕರ್ತವ್ಯ ನಿರ್ವಹಿಸಿ ನಂತರ ಹೊನ್ನಾವರ ಕರಾವಳಿ ಕಾವಲು ಪಡೆ ಠಾಣೆಗೆ ವರ್ಗಾವಣೆ ಹೊಂದಿ **MINISTRY OF HOME AFFAIRS** ಅಡಿ ನಡೆಯುವ ತರಬೇತಿಯಲ್ಲಿ ಗುಜರಾತ್‌ನ **NATIONAL ACADEMY OF COASTAL POLICING ( NACP ) TRAINING CENTRE** ನಲ್ಲಿ 10 ವಾರಗಳ ಕಾಲ ತರಬೇತಿಯನ್ನು ಪಡೆದು ಅಲ್ಲಿ ನಡೆಸಿದ **INDOOR AND OUTDOOR** ವಿಭಾಗದಲ್ಲಿ **ALL OVER INDIA** ಕರಾವಳಿ ಪೊಲೀಸರಿಗೆ ನಡೆಸಿದ ಪರೀಕ್ಷೆಯಲ್ಲಿ **SECOND RANK** ಪಡೆದು ಕರ್ನಾಟಕ ರಾಜ್ಯ ಪೊಲೀಸ್‌ನ ಗರಿಮೆಯನ್ನು ಹೆಚ್ಚಿಸಿದ್ದಾರೆ. ಚಿಕ್ಕ ಹಳ್ಳಿಯಲ್ಲಿ ಹುಟ್ಟಿ, ಬಾಲ್ಯದಿಂದಲೂ ಕನ್ನಡ ಭಾಷೆಯಲ್ಲಿ ಅಧ್ಯಯನ ಮಾಡಿ **NATIONAL LEVEL ENGLISH** ಭಾಷೆ ಪರೀಕ್ಷೆ ಬರೆದು ರ್‍ಯಾಂಕ್ ಪಡೆದಿರುವುದು ಸಾಧನೆಯ ಹಂಬಲವುಳ್ಳವರೆಲ್ಲರಿಗೂ ಸ್ಫೂರ್ತಿಯ ವಿಷಯ. ಚಿಕ್ಕಂದಿನಿಂದಲೂ ಇಂಗ್ಲಿಷ್ ಮಾಧ್ಯಮದಲ್ಲಿ ಓದಿ ಪದವಿ ಪಡೆದವರು ಆಂಗ್ಲ ಮಾಧ್ಯಮ ಪರೀಕ್ಷೆಯಲ್ಲಿ ಸಾಧನೆ ಮಾಡುವುದು ದೊಡ್ಡ ಸಂಗತಿ ಏನಲ್ಲಾ! ಆದರೆ ಕನ್ನಡ ಮಾಧ್ಯಮದಲ್ಲಿ ಓದಿ ಇಂತಹ ಸಾಧನೆ ಮಾಡಿರುವುದು ನಿಜವಾಗಿಯೂ ಇಲಾಖೆಗೆ ಮತ್ತು ಸಮಾಜಕ್ಕೆ ಹೆಮ್ಮೆ ತರುವ ವಿಷಯ ಹಾಗೂ ಇವರು ತರಬೇತಿಯಲ್ಲಿ ಅತ್ಯುತ್ತಮವಾಗಿ **All Rounder** ಪ್ರಶಿಕ್ಷಣಾರ್ಥಿ ಎಂಬ ಖ್ಯಾತಿಯನ್ನು ಅಲ್ಲಿನ **INSTRUCTORS** ಗಳಿಂದ ಪಡೆದಿದ್ದಾರೆ. ಶ್ರೀಯುತರು ತಮ್ಮ ಬಿಡುವಿನ ಸಮಯದಲ್ಲಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತೊಡಗುವ ಮೂಲಕ ಉತ್ತಮ ಪ್ರವೃತ್ತಿಯನ್ನು ಹೊಂದಿದ್ದಾರೆ. **SUCCESS IS NOT A DESTINATION IT IS JOURNEY** ಎಂಬುದಕ್ಕೆ ಇವರು ಅತ್ತು ್ಯತ್ತಮವಾದ ಉದಾಹರಣೆಯಾಗಿದ್ದಾರೆ. ದೇವರು ಇವರಿಗೆ ಇನ್ನೂ ದೊಡ್ಡ ಮಟ್ಟದ ಸಾಧನೆ ಮಾಡಲು ಶಕ್ತಿ ನೀಡಲೆಂದು ನಾವೆಲ್ಲರೂ ಆಶಿಸೋಣ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State